# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ನವೆಂಬರ್ 13, 2021

ಸಂಪುಟ : 48 ಸಂಚಿಕೆ : 182 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 4.00 www.janathavani.com janathavani@mac.com




**ಅರಿವಿನ ರಂಗೋಲಿ**

ದಾವಣಗೆರೆ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಯಲ್ಲಿ ಪ್ಯಾನ್ ಇಂಡಿಯಾ ಅವೇರ್‌ನೆಸ್ ಅಂಡ್ ಔಟ್‌ರೀಚ್ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಐ.ಸಿ.ಡಿ.ಎಸ್. ಕಾರ್ಯಕ್ರಮದ ಅರಿವು ಮೂಡಿಸುವ ರಂಗೋಲಿಗಳನ್ನು ವಿವಿಧ ಕಾಳುಗಳು, ಬೆಲ್ಲ, ಮೊಟ್ಟೆಗಳಿಂದ ರಚಿಸಿದ್ದರು.

# ಶೆಟ್ಟರ್ ತುರ್ತು ದೆಹಲಿಗೆ

ಬೆಂಗಳೂರು, ನ. 12 - ಪಕ್ಷದ ಹಿರಿಯ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರನ್ನು ಬಿಜೆಪಿ ವರಿಷ್ಠರು ದೆಹಲಿಗೆ ತುರ್ತಾಗಿ ಕರೆಸಿಕೊಂಡಿದ್ದಾರೆ.

ಹುಬ್ಬಳ್ಳಿಯಿಂದ ಬೆಂಗಳೂರಿಗೆ ಹೊರಟಿದ್ದ ಶೆಟ್ಟರ್ ಅವರನ್ನು ಸಂಪರ್ಕಿಸಿದ ವರಿಷ್ಠರು, ತಕ್ಷಣವೇ ದೆಹಲಿಗೆ ಬರುವಂತೆ ಆದೇಶ ಮಾಡಿದರು. ವರಿಷ್ಠರ ಆಣತಿಯಂತೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದಲೇ ದೆಹಲಿಗೆ ಪ್ರಯಾಣ ಬೆಳೆಸಿದರು.

ಕೇಂದ್ರ ಗೃಹ ಸಚಿವ ಅಮಿತ್ ಷಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ, ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಭೇಟಿಗೆ ಸಮಯಾವಕಾಶ ನಿಗದಿಯಾಗಿದೆ.

ಕರ್ನಾಟಕದ ಬಿಜೆಪಿ ಸರ್ಕಾರದ ಕೆಲವು ಆಡಳಿತಗಾರರ ಮೇಲೆ ಬಿಟ್ ಕಾಯಿನ್ ಹಗರಣದ ಆರೋಪ ಕೇಳಿ ಬಂದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿಧ್ವನಿಸುತ್ತಿರುವುದು ಕೇಂದ್ರ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

> **ಬೊಮ್ಮಾಯಿ ಅವರು ನಗರಕ್ಕೆ ಹಿಂತಿರುಗುತ್ತಿದ್ದಂತೆ, ಜಗದೀಶ್ ಶೆಟ್ಟರ್ ಅವರಿಗೆ ವರಿಷ್ಠರು ತುರ್ತು ಬುಲಾವ್ ಮಾಡಿರುವುದಕ್ಕೆ ರಾಜ್ಯ ಬಿಜೆಪಿ ವಲಯದಲ್ಲಿ ಹಲವು ಅಭಿಪ್ರಾಯಗಳು ಕೇಳಿಬರುತ್ತಿವೆ.**

ಪ್ರಕರಣಕ್ಕೆ ಸಂಬಂಧಿಸಿದಂತೆ ಅಮೆರಿಕದ ತನಿಖಾ ಸಂಸ್ಥೆ ಈಗಾಗಲೇ ಭಾರತಕ್ಕೆ ಆಗಮಿಸಿ, ಮಾಹಿತಿ ಪಡೆದು ತೆರಳಿದೆ.

ಬಿಟ್ ಕಾಯಿನ್ ವೆಬ್‌ಹ್ಯಾಕ್ ಸುಲಭವಲ್ಲ ಅಂದುಕೊಂಡಿದ್ದ ಅಮೆರಿಕ ಆಡಳಿತ, ಈಗ ಭಾರತದಲ್ಲಿ ಇಂತಹ ದಂಧೆ ನಡೆದಿದೆ ಎಂದಾದರೆ, ದೇಶದ ಆರ್ಥಿಕ ಸ್ಥಿತಿಯ ಮೇಲೂ ದೊಡ್ಡ ಪರಿಣಾಮ ಬೀರುತ್ತದೆ.

ಇದರ ಮಾಹಿತಿಯನ್ನು ಅಲ್ಲಿನ ಆಡಳಿತ ಭಾರತ ಸರ್ಕಾರಕ್ಕೂ ರವಾನಿಸಿದೆ. ಇದರ ಬೆನ್ನಲ್ಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ದಹೆಲಿಗೆ ಕರೆಸಿಕೊಂಡಿದ್ದ ಪ್ರಧಾನಿಯವರು ವಿವರವಾದ ಮಾಹಿತಿ ಪಡೆದಿದ್ದರು.

ಎರಡು ದಿನಗಳ ದೆಹಲಿ ಭೇಟಿ ಸಂದರ್ಭದಲ್ಲಿ ಮುಖ್ಯಮಂತ್ರಿಯವರು ಕೇಂದ್ರ ಗೃಹ ಸಚಿವರು, ಪಕ್ಷದ ರಾಷ್ಟ್ರೀಯ ಅಧ್ಯಕ್ಷರನ್ನು ಭೇಟಿ ಮಾಡಿ, ಇಂದು ನಗರಕ್ಕೆ ಹಿಂತಿರುಗಿದ್ದಾರೆ.

ಶೆಟ್ಟರ್ ಅವರನ್ನು ನಾಡಿದ್ದು, ಭಾನುವಾರದ ವರೆಗೂ ದೆಹಲಿಯಲ್ಲೇ ಉಳಿದುಕೊಳ್ಳುವಂತೆ ವರಿಷ್ಠರು ಸಲಹೆ ಮಾಡಿದ್ದಾರೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

ಬೊಮ್ಮಾಯಿ ಅವರು, ಕಳೆದ ಬುಧವಾರ ದೆಹಲಿಗೆ ತೆರಳುತ್ತಿದ್ದಂತೆ, ಇತ್ತ ಮಾಜಿ ಮುಖ್ಯಮಂತ್ರಿ ಬಿ.ಎಸ್. (2ನೇ ಪುಟಕ್ಕೆ)

## ನಿಜಲಿಂಗಪ್ಪರ ಮನೆ ಸಂರಕ್ಷಣೆಗಿದ್ದ ತಾಂತ್ರಿಕ ತೊಡಕು ನಿವಾರಣೆ



ಚಿತ್ರದುರ್ಗ, ನ.12- ರಾಜ್ಯದ ಮಾಜಿ ಮುಖ್ಯಮಂತ್ರಿ ದಿ.ಎಸ್. ನಿಜಲಿಂಗಪ್ಪನವರು ಚಿತ್ರದುರ್ಗದಲ್ಲಿ ವಾಸವಿದ್ದ ಮನೆಯನ್ನು ಸಂರಕ್ಷಿಸಿ, ಅಭಿವೃದ್ಧಿಪಡಿಸಲು 5 ಕೋಟಿ ರೂ.ಗಳಿಗೆ ಅನುಮೋದನೆ ನೀಡಿ ಬಿಡುಗಡೆ ಮಾಡುವಂತೆ ವಿಧಾನ ಪರಿಷತ್ ಸದಸ್ಯ ಮೋಹನ್ ಕುಮಾರ್ ಕೊಂಡಜ್ಜಿ ಅವರ ಮನವಿ ಪರಿಶೀಲಿಸಿ, ಸೂಕ್ತ ಪ್ರಸ್ತಾವನೆ ಸಲ್ಲಿಸುವಂತೆ ಸರ್ಕಾರ ನಿರ್ದೇಶಿಸಿತ್ತು.

ನಂತರ ನಿಜಲಿಂಗಪ್ಪ ಅವರ ಮನೆಯನ್ನು ಸ್ಮಾರಕವನ್ನಾಗಿ ಮಾಡುವ ಕುರಿತು ಅವರ ಕುಟುಂಬದೊಂದಿಗೆ ಚರ್ಚಿಸಿ, ಮನೆಯ ಮತ್ತು ನಿವೇಶನದ ಮಾರುಕಟ್ಟೆ ಮೌಲ್ಯ 4.18 ಕೋಟಿ ಹಾಗೂ ಮನೆ ಅಭಿವೃದ್ಧಿಗೆ 81.50 ಲಕ್ಷ ರೂ. ನಿರ್ಧರಿಸಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿತ್ತು.

ಆದರೆ ಮನೆಯನ್ನು ಸಂರಕ್ಷಿಸಿ ಅಭಿವೃದ್ದಿ ಪಡಿಸಲು ತಾಂತ್ರಿಕ ತೊಂದರೆ ಉಂಟಾಗಿದ್ದ ಹಿನ್ನೆಲೆಯಲ್ಲಿ ದಿ.ಎಸ್ಸೆನ್ ಅವರ ಮನೆಯನ್ನು 'ಖರೀದಿಸಿ ಸಂರಕ್ಷಿಸಲು ಹಾಗೂ ಅಭಿವೃದ್ಧಿಗೊಳಿಸಲು' ಎಂದು ತಿದ್ದುಪಡಿ ಮಾಡಿ ಸರ್ಕಾರ ಆದೇಶಿಸಿರುವ ಪರಿಣಾಮ ತಾಂತ್ರಿಕ ತೊಡಕು ನಿವಾರಣೆಯಾದಂತಾಗಿದೆ.

## ಅಯ್ಯಪ್ಪ ಸ್ವಾಮಿ ಯಾತ್ರೆಗೆ ಸಜ್ಜು



ತಿರುವನಂತಪುರಂ, ನ. 12 – ಶಬರಿಮಲೆಯ ಅಯ್ಯಪ್ಪ ಸ್ವಾಮಿ ದೇವಾಲಯ ಮುಂದಿನ ವಾರ ಎರಡು ತಿಂಗಳ ಯಾತ್ರಾ ಅವಧಿಗೆ ತೆರೆಯಲಿದೆ. ಈ ಸಂದರ್ಭದಲ್ಲಿ ಪ್ರತಿದಿನ 30 ಸಾವಿರದಷ್ಟು ಭಕ್ತರು ದರ್ಶನ ಪಡೆಯುವ ಅಂದಾಜಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನವೆಂಬರ್ 16ರಿಂದ ಆರಂಭವಾಗಲಿರುವ ಯಾತ್ರೆಗೆ ಸಕಲ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ. ನವೆಂಬರ್ 15ರ ಸಂಜೆ 5 ಗಂಟೆಗೆ ದೇವಾಲಯದ ಗರ್ಭಗುಡಿಯ ಬಾಗಿಲು ತೆರೆಯಲಾಗುವುದು.

ಈ ಸಂದರ್ಭದಲ್ಲಿ ನೂತನ ಅರ್ಚಕರಾದ ವಿ.ಕೆ. ಜಯರಾಜ್ ಪೊಟ್ಟಿ ಅವರಿಗೆ ಜವಾಬ್ದಾರಿ ವಹಿಸುವ ಸಮಾರಂಭವೂ ನಡೆಯಲಿದೆ. ಪ್ರಯಾಣಿಕರು ಕೊರೊನಾ ಶಿಷ್ಟಾಚಾರಗಳನ್ನು ಕಟ್ಟು ನಿಟ್ಟಾಗಿ ಪಾಲಿಸಬೇಕು. ಎರಡು ಡೋಸ್ ಲಸಿಕೆ ಪಡೆದಿರಬೇಕು ಇಲ್ಲವೇ ಆರ್.ಟಿ. - ಪಿ.ಸಿ.ಆರ್. ಪರೀಕ್ಷೆಗೆ ಒಳಗಾಗುವುದು ಕಡ್ಡಾಯವಾಗಲಿದೆ. ಇದರ ಜೊತೆಗೆ ಮೂಲ ಆಧಾರ್ ಕಾರ್ಡ್ ಸಹ ಹಾಜರುಪಡಿಸಬೇಕು ಎಂದು ಅಧಿಕಾರಿಗಳು ಹೇಳಿದ್ದಾರೆ.

ನೀಲಕ್ಕಲ್ ದೇವಾಲಯ ಶಿಬಿರವಾಗಿ ಕಾರ್ಯ (2ನೇ ಪುಟಕ್ಕೆ)

## ಚುನಾವಣಾ ನೀತಿ ಸಂಹಿತೆಗಳಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತ



ಹರಪನಹಳ್ಳಿ, ನ.12- ಚುನಾವಣಾ ನೀತಿ ಸಂಹಿತೆಗಳಿಂದಾಗಿ ದೇಶದಲ್ಲಾಗುವ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳುತ್ತವೆ. ನೀತಿ ಸಂಹಿತೆ ಜೀವನ ದುದ್ದಕ್ಕೂ ಬೇಕು. ಆದರೆ ಅದು ಸಾಂವಿಧಾನಿಕವೋ, ಆಯೋಗದ ನೀತಿಯೋ ಎನ್ನುವ ಮಾಹಿತಿಯನುಸಾರ ಕ್ರಮ ಕೈಗೊಳ್ಳ ಬೇಕು ಎಂದು ಸಿರಿಗೆರೆ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಶ್ರೀನಿವಾಸಪುರ ಗ್ರಾಮದಲ್ಲಿ ಶುಕ್ರವಾರ ನೂತನವಾಗಿ ನಿರ್ಮಿಸಿರುವ ಚೌಡೇಶ್ವರಿ ದೇವಸ್ಥಾನ ಉದ್ಘಾಟನೆ ಹಾಗೂ ಪ್ರಾಣ ಪ್ರತಿಷ್ಠಾಪನೆ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ, ಶ್ರೀಗಳು ಆಶೀರ್ವಚನ ನೀಡಿದರು.

ನೀತಿ ಸಂಹಿತೆಯನ್ನು ಟೀಕೆ ಮಾಡುವ ಉದ್ದೇಶ ನಮ್ಮದಲ್ಲ ಎಂದು ಸ್ಪಷ್ಟಪಡಿಸಿದ ಶ್ರೀಗಳು, ಸಾರ್ವಜನಿಕರಿಗೆ ಉಪಯೋಗಕ್ಕೆ ಬರುವ ಯೋಜನೆಯ ಮಂಜೂರಾತಿ, ಆಶ್ವಾಸನೆ ತಪ್ಪಾಗಲಾರದು. ಚುನಾವಣಾ ನೆಪದಲ್ಲಿ ಅಗತ್ಯವಿರುವ ಕಡೆ ಅಭಿವೃದ್ಧಿಗಾಗಿ ಕೈಗೊಳ್ಳುವ ಕಾಮಗಾರಿಗಳನ್ನು ಆಮಿಷದ ಕಾಮಗಾರಿ ಎಂದು ಪರಿಗಣಿಸುವುದು ಸಲ್ಲದು ಎಂದು ಹೇಳಿದರು.

ತಾಯಂದಿರು ತಮ್ಮ ಮಕ್ಕಳನ್ನು ರಾಜರಂತೆ ಪೋಷಿಸುವ ಹಾಗೆ, ನಮ್ಮ ಮಠವು ಸರ್ವ ಜನಾಂಗದ ಕ್ಷೇಮಾಭಿವೃದ್ಧಿ ಬಯಸುತ್ತದೆ. ಆದರೆ ಪ್ರಸ್ತುತ ದಿನಗಳಲ್ಲಿ ಮಾನವೀಯತೆ ಮರೆಯಾಗುತ್ತಿದ್ದು, ಕೇವಲ ನಗ, ನಾಣ್ಯಕ್ಕೆ ಗೌರವ ಹೆಚ್ಚಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

> **ಚುನಾವಣೆ ನೆಪದಲ್ಲಿ ಅಗತ್ಯವಿರುವ ಕಡೆ ಅಭಿವೃದ್ಧಿಗೆ ಕೈಗೊಳ್ಳುವ ಕಾಮಗಾರಿಗಳನ್ನು ಆಮಿಷದ ಕಾಮಗಾರಿ ಎಂದು ಪರಿಗಣಿಸುವುದು ಸೂಕ್ತವಲ್ಲ.**
> **- ತರಳಬಾಳು ಜಗದ್ಗುರುಗಳು**

ಜಗಳೂರಿನ 57 ಕೆರೆ ತುಂಬಿಸುವ ಯೋಜನೆಗೆ ಕೊರೊನಾ ಹಿನ್ನೆಲೆಯಲ್ಲಿ ಹಿನ್ನಡೆಯಾಗಿದೆ. ಈ ಯೋಜನೆಯಲ್ಲಿ ಮಠದ ಪಾತ್ರ ಎಷ್ಟಿದೆ ಎಂಬುದು ಪ್ರತಿಯೊಬ್ಬರಿಗೂ ತಿಳಿದಿದೆ. ರಾಜಕೀಯ ನಾಯಕರು ಮಠದ ಮಕ್ಕಳೇ ಆಗಿದ್ದಾರೆ. ಎಚ್.ಪಿ ರಾಜೇಶ್, ಎಚ್. ಆಂಜನೇಯ, ಎಸ್.ಎಸ್ ಮಲ್ಲಿಕಾರ್ಜುನ್, ಜಿ.ಎಂ. ಸಿದ್ದೇಶ್ವರ, ಎಸ್.ವಿ ರಾಮಚಂದ್ರ, ಚಂದ್ರಪ್ಪ ಆದಿಯಾಗಿ ಯೋಜನೆಗೆ ಶ್ರಮಿಸಿದ್ದಾರೆ. ಅವರೆಲ್ಲರ (2ನೇ ಪುಟಕ್ಕೆ)

## ಅಕ್ಟೋಬರ್‌ನಲ್ಲಿ ಚಿಲ್ಲರೆ ಹಣದುಬ್ಬರ ಏರಿಕೆ

ನವದೆಹಲಿ, ನ. 12 – ಚಿಲ್ಲರೆ ಹಣದುಬ್ಬರ ಅಕ್ಟೋಬರ್ ತಿಂಗಳಲ್ಲಿ ಹೆಚ್ಚಾಗಿದ್ದು, ಶೇ.4.48ಕ್ಕೆ ತಲುಪಿದೆ. ಆಹಾರ ಬೆಲೆ ಏರಿಕೆ ಇದಕ್ಕೆ ಕಾರಣವಾಗಿದೆ. ಸೆಪ್ಟೆಂಬರ್ ತಿಂಗಳಲ್ಲಿ ಗ್ರಾಹಕರ ಹಣದುಬ್ಬರ ಸೂಚ್ಯಂಕ ಶೇ.4.35ರಷ್ಟಿತ್ತು. ಕಳೆದ ವರ್ಷ ಅಕ್ಟೋಬರ್ 2020ರಲ್ಲಿ ಹಣದುಬ್ಬರ ದರ ಶೇ.7.61ರಷ್ಟಿತ್ತು. 2021-22ರಲ್ಲಿ ಚಿಲ್ಲರೆ ಹಣದುಬ್ಬರ ಶೇ.5.3ರಷ್ಟಿರಲಿದೆ ಎಂದು ರಿಸರ್ವ್ ಬ್ಯಾಂಕ್ ಅಂದಾಜಿಸಿದೆ. ರಿಸರ್ವ್ ಬ್ಯಾಂಕ್ ತನ್ನ ಹಣಕಾಸು ನೀತಿ ನಿರ್ಧರಿಸುವಾಗ ಚಿಲ್ಲರೆ ಹಣದುಬ್ಬರವನ್ನು ಪ್ರಮುಖವಾಗಿ ಪರಿಗಣಿಸುತ್ತದೆ.


## ದಿ॥ ಡಾ. ಕೆ. ಕರಿಯಪ್ಪ ಅವರ ಧರ್ಮಪತ್ನಿ ಶ್ರೀಮತಿ ಕೌಸಲ್ಯ ನಿಧನ



ಜನನ : 27-02-1942

ನಿಧನ : 12-11-2021

ದಾವಣಗೆರೆ ಪಿ.ಜೆ.ಬಡಾವಣೆ 9ನೇ ಮುಖ್ಯರಸ್ತೆಯ 'ಲಕ್ಷ್ಮಿ ನಿವಾಸ' ವಾಸಿ,
ಹೆಸರಾಂತ ವೈದ್ಯರಾಗಿದ್ದ ದಿ॥ ಡಾ॥ ಕೆ. ಕರಿಯಪ್ಪ ಅವರ ಧರ್ಮಪತ್ನಿ
**ಶ್ರೀಮತಿ ಕೌಸಲ್ಯ** ಅವರು
ದಿನಾಂಕ 12.11.2021ರ ಶುಕ್ರವಾರ ಮಧ್ಯಾಹ್ನ 2.35 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು.
ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.11.2021ರ ಶನಿವಾರ ಬೆಳಿಗ್ಗೆ 11.30ಕ್ಕೆ ಕೊಂಡಜ್ಜಿ ರಸ್ತೆಯ ಕೇಂದ್ರೀಯ ವಿದ್ಯಾಲಯದ ಬಳಿ ಇರುವ ಬಿ.ಎಸ್.ಚನ್ನಬಸಪ್ಪನವರ ತೋಟದ ಹಿಂಭಾಗದಲ್ಲಿರುವ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

ಪುತ್ರ – ಸೊಸೆ : ಶ್ರೀಮತಿ ವಿಜಯಲಕ್ಷ್ಮಿ ಮತ್ತು ಗಣೇಶ್ ಬಾಬು ಕೆ. ಇಂಜಿನಿಯರ್
ಪುತ್ರಿ : ಶ್ರೀಮತಿ ಗೀತಾ ಮಾಲತೇಶ್
ಪುತ್ರಿ – ಅಳಿಯ : ಡಾ. ಗಾಯತ್ರಿ ಬಾನೆ ಮತ್ತು ಡಾ. ಶ್ರೀಮಂತ್ ಬಾನೆ
ಪುತ್ರ – ಸೊಸೆ : ಡಾ. ಸವಿತಾ ಮಹೇಶ್ ಮತ್ತು ಡಾ. ಮಹೇಶ್ ಕೆ.
ಮೊಮ್ಮಕ್ಕಳು ಹಾಗೂ ಅಪಾರ ಬಂಧು – ಮಿತ್ರರು.

✦ ಶ್ರೀ ರಾಮಕೃಷ್ಣ ನರ್ಸಿಂಗ್ ಹೋಂ, ದಾವಣಗೆರೆ.
✦ ಸಂತಾನ ಫರ್ಟಿಲಿಟಿ ಸೆಂಟರ್, ದಾವಣಗೆರೆ.
✦ ಶ್ರೀ ರಾಮಕೃಷ್ಣ ಮೆಡಿಕಲ್ಸ್, ದಾವಣಗೆರೆ.
✦ ಅಜಿತ್ ನರ್ಸಿಂಗ್ ಹೋಂ, ರಾಯಬಾಗ್.


### ತ್ರಿಪುರಾದಲ್ಲಿ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯಕ್ಕೆ ಖಂಡನೆ

## ಮುಸ್ಲಿಂ ಸಮಾಜದ ಪ್ರತಿಭಟನೆ



ದಾವಣಗೆರೆ, ನ.12- ತ್ರಿಪುರಾದಲ್ಲಿ ಪ್ರಾರ್ಥನಾ ಮಂದಿರಗಳು ಮತ್ತು ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯದ ವಿರುದ್ಧ ನಗರದಲ್ಲಿ ಇಂದು ಮುಸ್ಲಿಂ ಸಮಾಜದಿಂದ ತೀವ್ರ ಆಕ್ರೋಶ ವ್ಯಕ್ತವಾಯಿತು.

ನಗರದ ಮಂಡಕ್ಕಿ ಭಟ್ಟಿಯಲ್ಲಿರುವ ಮಿಲಾದ್ ಮೈದಾನದಲ್ಲಿ ತಂಜೀಮುಲ್ ಮುಸ್ಲಿಮಿನ್ ಫಂಡ್ ಅಸೋಸಿಯೇಷನ್ ಮತ್ತು ತಂಜೀಮ್ ಉಲೇಮಾ ಅಹ್ಲೆ ಸುನ್ನತ್ ಸಂಘಟನೆ ನೇತೃತ್ವದಲ್ಲಿ ಮುಸ್ಲಿಂ ಸಮಾಜ ಬಾಂಧವರು, ಮುಖಂಡರು, ಸಂಘಟನೆ ಪದಾಧಿಕಾರಿಗಳು ಬೃಹತ್ ಪ್ರತಿಭಟನೆ ನಡೆಸಿ, ಬಹಿರಂಗ ಸಭೆ ನಡೆಸಿದರು.

ತ್ರಿಪುರಾದಲ್ಲಿ ಅಲ್ಪ ಸಂಖ್ಯಾತರ ಮೇಲೆ ಹಲ್ಲೆಗೆ ಕಾರಣರಾದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕೆಂದು ಆಗ್ರಹಿಸಿದರು.

> **ಹಲ್ಲೆ ಮಾಡಿದವರ ಮೇಲೆ ಕಠಿಣ ಕಾನೂನು ಕ್ರಮಕ್ಕೆ, ಘಟನೆ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ಆಗ್ರಹ**

ಪ್ರತಿಭಟನಾ ಸ್ಥಳಕ್ಕಾಗಮಿಸಿದ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಿಷ್ಯಂತ್ ಅವರ ಮೂಲಕ ರಾಷ್ಟ್ರಪತಿ ಅವರಿಗೆ ಮನವಿ ಸಲ್ಲಿಸಲಾಯಿತು.

ಮುಖಂಡ ಅಯೂಬ್ (2ನೇ ಪುಟಕ್ಕೆ)

## ಉನ್ನತ ವ್ಯಾಸಂಗ: ರೈತರ ಮಕ್ಕಳಿಗೆ ಶಿಷ್ಯ ವೇತನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ನ. 12 - ಪ್ರೌಢ ಶಿಕ್ಷಣದ ನಂತರ ಉನ್ನತ ವ್ಯಾಸಂಗಕ್ಕೆ ತೆರಳುವ ರೈತ ಮಕ್ಕಳಿಗೆ ಶಿಷ್ಯವೇತನಕ್ಕೆ ಸರ್ಕಾರ ಅರ್ಜಿ ಆಹ್ವಾನಿಸಿದೆ.

ಮುಖ್ಯಮಂತ್ರಿಯಾಗಿ ಬಸವರಾಜ ಬೊಮ್ಮಾಯಿ ಅಧಿಕಾರ ವಹಿಸಿಕೊಂಡ ದಿನದಂದು ಪಿಯುಸಿ ನಂತರದ ಉನ್ನತ ವ್ಯಾಸಂಗಕ್ಕೆ ತೆರಳುವ ರೈತ ಮಕ್ಕಳಿಗೆ 3000 ರೂ.ನಿಂದ 11,000 ರೂ.ವರೆಗೂ ಶಿಷ್ಯವೇತನ ನೀಡುವುದಾಗಿ ಘೋಷಣೆ ಮಾಡಿದ್ದರು.

ಇದಕ್ಕಾಗಿ ಒಂದು ಸಾವಿರ ಕೋಟಿ ರೂ. ಮೀಸಲಿರಿಸಿದ್ದಲ್ಲದೆ, ಸರ್ಕಾರಿ ಆದೇಶವನ್ನೂ ಹೊರಡಿಸಲಾಗಿತ್ತು. ಇದೀಗ ಕೃಷಿ ಇಲಾಖಾ ವತಿಯಿಂದಲೇ ಶಿಷ್ಯವೇತನ ನೀಡಲು ಅರ್ಜಿ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ತಾವು ಕಲಿಕೆ ಮಾಡುತ್ತಿರುವ (2ನೇ ಪುಟಕ್ಕೆ)


## ವಿದ್ಯಾರ್ಥಿಗಳಿಗೊಂದು ಸಿಹಿ ಸುದ್ದಿ!

## How to Score more Marks in Exam



ಸಾಮಾನ್ಯವಾಗಿ ಸಾಮಾನ್ಯ ವಿದ್ಯಾರ್ಥಿಗಳು ಅಸಾಮಾನ್ಯ ವಿದ್ಯಾರ್ಥಿಗಳು ದಿನಕ್ಕೆ 3 ರಿಂದ 4 ಗಂಟೆಗಳ ಕಾಲ ಓದುತ್ತಾರೆ. ಆದರೆ ಪರೀಕ್ಷೆಯ ಸಮಯಕ್ಕೆ ಮರೆತು ಬಿಡುತ್ತಾರೆ.

ಇದಕ್ಕೆ ಮುಖ್ಯ ಕಾರಣ ಅವರು ಅಳವಡಿಸಿಕೊಂಡಿರುವ ಓದುವ ವಿಧಾನ (STUDY METHOD). ಇವರು ಹೊಸದಾಗಿ ಕಂಡು ಹಿಡಿದಿರುವ CREATIVE STUDY METHOD (CSM) ವಿಧಾನದಲ್ಲಿ ಓದಿದರೆ 90% ವಿಷಯ ಜೀವನದುದ್ದಕ್ಕೂ ನೆನಪಿನಲ್ಲಿರುತ್ತದೆ ಎನ್ನುತ್ತಾರೆ. MIND POWER ಆಕಾಡೆಮಿಯ ಮುಖ್ಯ ತರಬೇತುದಾರರಾದ **ಎಸ್.ಪ್ರಶಾಂತ್** ಈ ಹೊಸ ಓದುವ ರೀತಿ (CSM) ಅನ್ನು ಅಳವಡಿಸಿಕೊಂಡು ಹಲವಾರು (90%ಗೂ ಹೆಚ್ಚು) ಅಂಕಗಳನ್ನು ಗಳಿಸಿರುತ್ತಾರೆ. ಇದನ್ನು ವಿದ್ಯಾರ್ಥಿ ಜೀವನದಲ್ಲಿ ಹೇಗೆ ಅಳವಡಿಸಿಕೊಂಡು ಹೆಚ್ಚು ಅಂಕಗಳಿಸುವುದು ಎಂದು ಅರಿಯಲು 90 ನಿಮಿಷಗಳ ಕಾಲ ಸೆಮಿನಾರ್‌ನಲ್ಲಿ ವಿದ್ಯಾರ್ಥಿಗಳಾದ ನೀವು ತಪ್ಪದೆ ಪೋಷಕರೊಂದಿಗೆ ಭಾಗವಹಿಸಿ.

**ಉಚಿತ ಪ್ರವೇಶ**

ಇಂದು (ಶನಿವಾರ) 13-11-2021
ಸಂಜೆ 6 ರಿಂದ 7.30ರವರೆಗೆ
ಸ್ಥಳ: ರೋಟರಿ ಬಾಲಭವನ, ಸೀತಮ್ಮ ಹೈಸ್ಕೂಲ್ ಎದುರು, ಪ್ರವಾಸಿ ಮಂದಿರ ರಸ್ತೆ, ದಾವಣಗೆರೆ.

**ಮೆದುಳಿನ ಅದ್ಭುತ ಶಕ್ತಿಯ ಪ್ರದರ್ಶನ ನೋಡಲು ಮರೆಯದಿರಿ.**

# ದೇವದಾಸಿ ಪದ್ಧತಿ ಮುಕ್ತ ಸಮಾಜಕ್ಕೆ ಪಣ ತೊಡಬೇಕು

## ಹರಪನಹಳ್ಳಿಯ ಹಿರಿಯ ಸಿವಿಲ್ ನ್ಯಾಯಾಧೀಶರಾದ ಭಾರತಿ ಕರೆ



ಹರಪನಹಳ್ಳಿ, ನ.12- ದೇವದಾಸಿಯಂತಹ ಅನಿಷ್ಟ ಪದ್ಧತಿ ಅಳಿಸಿ ಹಾಕುವ ಮೂಲಕ ಮಾನವ ಘನತೆ ಉಳಿಸಬೇಕಾಗಿದೆ. ದೇವದಾಸಿ ಪದ್ಧತಿ ಮುಕ್ತ ಸಮಾಜಕ್ಕೆ ನಾವೆಲ್ಲರೂ ಪಣ ತೊಡಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ. ಭಾರತಿ ಹೇಳಿದರು.

ಪಟ್ಟಣದ ಬಾಬು ಜಗಜೀವನ ರಾಂ ಭವನದಲ್ಲಿ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ಆಯೋಜಿಸಲಾಗಿದ್ದ ದೇವದಾಸಿ ಪದ್ಧತಿ ತಡೆಯುವಿಕೆ ಕುರಿತಾದ ಕಾನೂನು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ದೇವದಾಸಿ ಪದ್ಧತಿಗೊಳಗಾದ ಮಹಿಳೆಯರು ನರಕ ಅನುಭವಿಸುತ್ತಿದ್ದು, ಸಮಾಜ ಅವರನ್ನು ಪ್ರಾಣಿಗಳಂತೆ ಬಳಸಿಕೊಂಡು ಶೋಷಣೆ ಮಾಡುತ್ತಿರುವುದು ವಿಷಾದನೀಯ. ದೇವದಾಸಿ ನಿರ್ಮೂಲನೆ ಪದ್ಧತಿ ಕಾಯ್ದೆ ಜಾರಿಯಲ್ಲಿದ್ದರೂ ಹಲವೆಡೆ ಮುತ್ತು ಕಟ್ಟುವ ಮೂಲಕ ದೇವದಾಸಿ ಪದ್ಧತಿಗೆ ಮಹಿಳೆಯರನ್ನು ನೂಕುತ್ತಿರುವುದು ಕಂಡು ಬರುತ್ತಿದೆ.

ಅನಿಷ್ಟ ಪದ್ಧತಿಯಿಂದ ಶೋಷಣೆಗೆ ಒಳಗಾಗಿರುವ ನಮ್ಮ ತಾಯಂದಿರು, ಸಹೋದರಿಯರನ್ನು ಸಂಬಂಧಿಸಿದ ಇಲಾಖೆಗಳು ತಡೆಯುವ ಕೆಲಸ ಮಾಡಬೇಕು. ದೇವದಾಸಿಯರ ಮರು ಸಮೀಕ್ಷೆ ನಡೆಸಿ ಅವರಿಗೆ ಪುನರ್ವಸತಿ, ಸೌಲಭ್ಯಗಳನ್ನು ನೀಡುವ ಜವಾಬ್ದಾರಿ ಸಮಾಜದ ಎಲ್ಲರ ಮೇಲಿದೆ ಎಂದರು.

ನ್ಯಾಯಾಲಯದಲ್ಲಿರುವ ಸಾರ್ವಜನಿಕರ ಸಣ್ಣ ಪುಟ್ಟ ಪ್ರಕರಣಗಳನ್ನು ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಇತ್ಯರ್ಥ ಪಡಿಸಲಾಗುವುದು. ಕೆಲವು ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಬಗೆಹರಿಸಲಾಗುವುದು ಎಂದು ಸಾರ್ವಜನಿಕರಿಗೆ ತಿಳಿ ಹೇಳಿದರು.

ಕಾರ್ಯಕ್ರಮದಲ್ಲಿ ಸಿವಿಲ್ ಕಿರಿಯ ನ್ಯಾಯಾಧೀಶ ಫಕ್ಕೀರವ್ವ ಕೆಳಗೇರಿ ಮಾತನಾಡಿದರು.

ಸರ್ಕಾರಿ ಅಭಿಯೋಜಕರಾದ ಎನ್. ಮೀನಾಕ್ಷಿ, ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶ್‌ಗೌಡ, ವಕೀಲರ ಸಂಘದ ಉಪಾಧ್ಯಕ್ಷ ಟಿ. ವೆಂಕಟೇಶ್, ಕಾರ್ಯದರ್ಶಿ ಕೆ. ಬಸವರಾಜ್, ದೇವದಾಸಿ ಮಹಿಳೆಯರ ಒಕ್ಕೂಟದ ಸದಸ್ಯೆ ಸರೋಜ ಹವಳದ, ಶಿಕ್ಷಕ ಅರ್ಜುನ್ ಪರಸಪ್ಪ, ಅಂಜಿನಪ್ಪ, ವಕೀಲರುಗಳಾದ ಕೆ. ಬಸವರಾಜ್, ಎಂ. ಮೃತ್ಯುಂಜಯ, ಬಿ. ಗೋಣಿಬಸಪ್ಪ, ಮಂಜ್ಯಾನಾಯ್ಕ, ಬಿ.ವಿ. ಬಸವನಗೌಡ, ಕೆ. ಸಣ್ಣ ನಿಂಗನಗೌಡ, ಮುತ್ತಿಗಿ ಮಂಜುನಾಥ್, ಕೆ.ಎಸ್. ವಾಮದೇವ, ಜಿ.ಎಸ್. ತಿಪ್ಪೇಸ್ವಾಮಿ, ಬಂಡ್ರಿ ಆನಂದ್, ಕೆ. ಕೊಟ್ರೇಶ್, ನಂದೀಶ್ ನಾಯ್ಕ, ಹುಲಿಯಪ್ಪ, ಮುಜೀಬುರ್ ರಹಿಮಾನ್, ಎಸ್. ಜಾಕೀರ್, ಸಿದ್ದೇಶ್, ರೇವಣಸಿದ್ದಪ್ಪ, ಬಸವರಾಜ್, ಕೊಟ್ರೇಶ್ ಇನ್ನಿತರರಿದ್ದರು.

# ದೇವಸ್ಥಾನ ನಿರ್ಮಿಸಿದರೆ ಸಾಲದು, ಸ್ವಚ್ಛತೆ ಕಾಪಾಡಿ

## ಮಲೇಬೆನ್ನೂರು ಕಳಸಾರೋಹಣ ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣಾನಂದ ತೀರ್ಥ ಸ್ವಾಮೀಜಿ

ಮಲೇಬೆನ್ನೂರು, ನ.12- ವಿಘ್ನ ನಿವಾರಕ ವಿನಾಯಕನಿಗೆ ಮೊದಲ ಪೂಜೆ ಮಾಡುವ ಪರಿಪಾಠ ಹಿಂದಿನಿಂದಲೂ ಬಂದಿದ್ದು, ಒತ್ತಡದ ಬದುಕಿನ ಕಲಿಯುಗದಲ್ಲಿ ಮೋಕ್ಷ ಪಡೆಯಲು ದೇವರ ಮೊರೆ ಹೋಗಿ, ಭಕ್ತಿಮಾರ್ಗ ಅನುಸರಿಸಿ ಎಂದು ತೀರ್ಥಹಳ್ಳಿ ತಾಲ್ಲೂಕು ಮುಳುಬಾಗಿಲು ದ್ವಾರಕ ಸಂಸ್ಥಾನದ ಶ್ರೀ ಕೃಷ್ಣಾನಂದ ತೀರ್ಥ ಸ್ವಾಮೀಜಿ ಹೇಳಿದರು.

ಪಟ್ಟಣದ ಇಂದಿರಾ ನಗರದ 6ನೇ ವಾರ್ಡ್‌ನಲ್ಲಿರುವ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದ ನೂತನ ಗೋಪುರದ ಕಳಸಾರೋಹಣವನ್ನು ಇಂದು ನೆರವೇರಿಸಿದ ನಂತರ ನಡೆದ ಧರ್ಮಸಭೆಯಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ದೇವಾಲಯದ ಕೀರ್ತಿ ಹೆಚ್ಚಿಸುವಲ್ಲಿ ಮೂಲ ವಿಗ್ರಹದ ಪೂಜೆ, ಗೋಪುರದ ಕಳಸ, ಗಂಟೆ, ಮಂಗಳವಾದ್ಯ, ವೇದಘೋಷ ಪ್ರಮುಖ





ಪಾತ್ರ ವಹಿಸುತ್ತವೆ. ದೇವಸ್ಥಾನಗಳನ್ನು ನಿರ್ಮಿಸಿದರೆ ಸಾಲದು, ಅಲ್ಲಿ ಸ್ವಚ್ಛತೆ ಕಾಪಾಡಿ, ಜನರಲ್ಲಿ ಭಕ್ತಿಭಾವ ಬರುವಂತೆ ಸುಂದರ ವಾತಾವರಣ ಸೃಷ್ಟಿ ಮಾಡಬೇಕೆಂದು ಸ್ವಾಮೀಜಿ ಹೇಳಿದರು.

ಕಳಸಾರೋಹಣದ ಅಂಗವಾಗಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ಅಭಿಷೇಕ, ಹೋಮಗಳು ಹಂಚಿನ ಮನೆ ಸುರೇಶ್ ಶಾಸ್ತ್ರಿ, ಗುರುಪ್ರಸಾದ್ ಜೋಯಿಸ್ ಅವರ ನೇತೃತ್ವದಲ್ಲಿ ನಡೆದವು. ಈ ವೇಳೆ ಸಾಮೂಹಿಕ ವಿವಾಹದಲ್ಲಿ 2 ಜೋಡಿ ವಧು-ವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ, ಪುರಸಭೆ ಮಾಜಿ ಉಪಾಧ್ಯಕ್ಷ ಬಿ.ಎಂ. ಚನ್ನೇಶ್ ಸ್ವಾಮಿ, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಹಿರಿಯರಾದ ನಿಟ್ಟೂರಿನ ಸಂಜೀವಮೂರ್ತಿ, ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿಕುಮಾರ್, ದೇವಸ್ಥಾನ ಸಮಿತಿಯ ಕೆ.ಜಿ. ರಂಗನಾಥ್, ಹಲುವಾಗಲು ಚಂದ್ರಪ್ಪ, ಕೆ.ಆರ್. ಜಯ್ಯಣ್ಣ, ಕೂಲಂಬಿ ಬಸವರಾಜಪ್ಪ, ವೈ.ಜಿ. ಶಿವಕುಮಾರ್, ಕೆ.ಜಿ. ಲೋಕೇಶ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಪಟ್ಟಣದ ಕಾಲಭೈರೇಶ್ವರ ದೇವಸ್ಥಾನದ ಗೋಪುರಕ್ಕೆ ಇದೇ ದಿನ ಶ್ರೀ ಕೃಷ್ಣಾನಂದ ತೀರ್ಥ ಸ್ವಾಮೀಜಿ ಅವರು ಕಳಸಾರೋಹಣ ನೆರವೇರಿಸಿದರು. ಪೇಟೆ ಬೀದಿಯ ಶಂಕರಮಠಕ್ಕೆ ಶ್ರೀಗಳು ಭೇಟಿ ನೀಡಿ, ಭಕ್ತರಿಗೆ ದರ್ಶನಾಶೀರ್ವಾದ ನೀಡಿದರು.

**ಅಣಬೇರು ಗ್ರಾಮದಲ್ಲಿ ಇಂದು - ನಾಳೆ**

## ಈಶ್ವರ, ಆಂಜನೇಯ, ಕುಕ್ಕುವಾಡೇಶ್ವರಿ ದೇವಸ್ಥಾನಗಳ ಉದ್ಘಾಟನೆ

ದಾವಣಗೆರೆ ತಾಲ್ಲೂಕಿನ ಅಣಬೇರು ಗ್ರಾಮದಲ್ಲಿ ಇಂದು ಮತ್ತು ನಾಳೆ ಶ್ರೀ ಈಶ್ವರ, ಶ್ರೀ ಆಂಜನೇಯ ಸ್ವಾಮಿ, ಶ್ರೀ ಕುಕ್ಕುವಾಡೇಶ್ವರಿ ದೇವಿ ದೇವಸ್ಥಾನಗಳ ಉದ್ಘಾಟನೆ, ಮೂರ್ತಿ ಪ್ರತಿಷ್ಠಾಪನೆ ಮತ್ತು ಕಳಸಾರೋಹಣ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಇಂದು ಸಂಜೆ ಗೋಧೂಳಿ ಲಗ್ನದಲ್ಲಿ ನೂತನ ದೇವರುಗಳನ್ನು ಗ್ರಾಮ ದರ್ಶನ ಮಾಡಿಸುವುದು. ನಾಳೆ ಭಾನುವಾರ ಬೆಳಿಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ 4.30 ರಿಂದ 8.30 ರವರೆಗೆ ಗಂಗಾ ಪೂಜೆ, ಪುಣ್ಯಾಹ ನಾಂದಿ ಸಮಾರಾಧಸಿ ಪಂಚಕಲಶ ನವಗ್ರಹ ಮೃತ್ಯುಂಜಯ ಪೂಜೆ, ದೇವರುಗಳಿಗೆ ಕುಂಭಾಭಿಷೇಕ, ವಸ್ತ್ರಾಲಂಕಾರ, ಪುಷ್ಪಾಲಂಕಾರ, ಫಲ ಅಲಂಕಾರ ಹಾಗೂ ಶ್ರೀಗಳಿಂದ ಪ್ರಾಣ ಪ್ರತಿಷ್ಠಾಪನೆ, ನೇತ್ರೋನ್ಮಿಲನ, ಜೀವಕಳೆ ಕಳಸಾರೋಹಣ ನೆರವೇರಿಸಲಾಗುವುದು.

ಬೆಳಿಗ್ಗೆ 10.30 ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ, ಹೆಬ್ಬಾಳು ವಿರಕ್ತ ಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ, ಕನಕ ಗುರು ಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ದೇವಸ್ಥಾನಗಳ ಸಮಿತಿ ಅಧ್ಯಕ್ಷ ಕೆ.ಸಿ. ರಾಜಪ್ಪ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ, ಪ್ರೊ. ಎನ್. ಲಿಂಗಣ್ಣ, ಬಯಲುಸೀಮೆ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಣಬೇರು ಜೀವನಮೂರ್ತಿ, ಅಪೂರ್ವ ಹೋಟೆಲ್ ಗ್ರೂಪ್ಸ್ ಮಾಲೀಕ ಅಣಬೇರು ರಾಜಣ್ಣ, ಜಿ.ಪಂ. ಮಾಜಿ ಅಧ್ಯಕ್ಷರಾದ ಅಣಬೇರು ಪಾರ್ವತಮ್ಮ, ಶೈಲಜಾ ಬಸವರಾಜ್, ತಾಪಂ ಸಾಮಾಜಿಕ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷರಾದ ಮಂಜುಳಾ ಶಿವಮೂರ್ತಿ, ಅಣಬೇರು ಗ್ರಾ.ಪಂ. ಅಧ್ಯಕ್ಷರಾದ ಕಾವ್ಯ ಬಿ.ಸಿ ಅಶೋಕ್ ಭಾಗವಹಿಸಲಿದ್ದಾರೆ.

# ಮುಸ್ಲಿಂ ಸಮಾಜದ ಪ್ರತಿಭಟನೆ



**(1ನೇ ಪುಟದಿಂದ)** ಪೈಲ್ವಾನ್ ಮಾತನಾಡಿ, ಇತ್ತೀಚೆಗೆ ಕೆಲ ಕೋಮುವಾದಿ ಜನರು ಮತ್ತು ಗುಂಪುಗಳು ಜಾತಿ ಜಾತಿಗಳ ಮಧ್ಯೆ ವಿಷ ಬೀಜ ಬಿತ್ತುವ ಕೆಲಸ ಮಾಡುತ್ತಿದ್ದಾರೆ. ಇದರಿಂದ ದೇಶದಲ್ಲಿ ಹಿಂಸಾತ್ಮಕ ಘಟನೆಗಳು ಸಂಭವಿಸುತ್ತಿವೆ. ಇಂತಹ ಘಟನೆಗಳನ್ನು ಸಮಾಜ ಖಂಡಿಸುತ್ತದೆ ಎಂದರು.

ಮನವಿ ಸ್ವೀಕರಿಸಿದ ಜಿಲ್ಲಾಧಿಕಾರಿ ಮಹಾಂತೇಶ ಜಿ. ಬೀಳಗಿ, ಶಾಂತಿ ಸಾಮರಸ್ಯದಿಂದ ಬಾಳುತ್ತಿರುವ ದಾವಣಗೆರೆಯ ಮುಸ್ಲಿಂ ಧರ್ಮೀಯರ ಮನವಿ ಪತ್ರವನ್ನು ರಾಷ್ಟ್ರಪತಿಗಳಿಗೆ ನಿಯಮಾನುಸಾರ ಕಳುಹಿಸಿಕೊಡಲಾಗುವುದು. ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಗೆ ಭಂಗ ಬಾರದಂತೆ ಶಾಂತಿಯುತವಾಗಿ ಸಭೆ ನಡೆಸಿ, ಮನವಿ ಮಾಡಿದ್ದು, ಈ ಮೂಲಕ ಶಾಂತಿ ಪ್ರಿಯರು ಎನ್ನುವುದನ್ನು ತೋರಿಸಿದ್ದೀರಿ. ಮೆರವಣಿಗೆಗೆ ಜಿಲ್ಲಾ ಪೊಲೀಸ್ ಇಲಾಖೆ ಅನುಮತಿ ನೀಡುವುದಿಲ್ಲವೆಂದಾಗ ಸಭೆ ನಡೆಸಲು ನೀಡಿದ ಸಲಹೆಗೆ ಸ್ಪಂದಿಸಿರುವುದು ಸ್ವಾಗತಾರ್ಹ ಎಂದು ತಿಳಿಸಿದರು.

ಧಾರ್ಮಿಕ ಗುರುಗಳಾದ ಮೌಲಾನಾ ಮಹಮ್ಮದ್ ಅನೀಸ್ ರಜಾ ಖಾದ್ರಿ ಸಾನ್ನಿಧ್ಯದಲ್ಲಿ ಮೌಲಾನಾ ಶಾಹಿದ್ ರಜಾ, ಸೈಯದ್ ಮುಕ್ತಿಯಾರ್, ಮೌಲಾನಾ ಇಲಿಯಾಜ್ ಖಾದ್ರಿ, ಸಮಾಜದ ಮುಖಂಡರಾದ ಸಾಧಿಕ್ ಪೈಲ್ವಾನ್, ಸೈಯದ್ ಸೈಫುಲ್ಲಾ, ಜೆ. ಅಮಾನುಲ್ಲಾ ಖಾನ್, ಫನ್ನೀ ತಾಹೀರ್, ಸಿರಾಜ್ ಅಹಮ್ಮದ್, ಸಿ.ಆರ್. ನಸೀರ್ ಅಹಮ್ಮದ್, ಪಿ.ಕೆ. ಮುಸ್ತಾಕ್ ಅಹಮ್ಮದ್, ಎ.ಬಿ. ರಹೀಂ ಸಾಬ್, ಸೈಯದ್ ಚಾರ್ಲಿ, ಟಿ. ಅಸ್ಗರ್, ಅಹ್ಮದ್ ರಜಾ, ಭಾಷಾ ಪೈಲ್ವಾನ್, ಯು.ಎಂ. ಮನ್ಸೂರ್ ಅಲಿ, ಖಾದರ್ ಭಾಷಾ ಸೇರಿದಂತೆ ಧರ್ಮ ಗುರುಗಳು, ಸಮಾಜದ ಮುಖಂಡರು ಭಾಗವಹಿಸಿದ್ದರು.

## ರೈತರ ಮಕ್ಕಳಿಗೆ ಶಿಷ್ಯ ವೇತನಕ್ಕೆ ಅರ್ಜಿ

**(1ನೇ ಪುಟದಿಂದ)** ಕಾಲೇಜುಗಳಲ್ಲಿ ತಮ್ಮ ತಂದೆ ಹಾಗೂ ತಾಯಿಯ ಆಧಾರ್ ಕಾರ್ಡ್‌ಗಳ ಪ್ರತಿಗಳನ್ನು ಸಲ್ಲಿಸಿ, ವೇತನ ಪಡೆಯಲು ಅರ್ಜಿ ಸಲ್ಲಿಸಬೇಕಾಗಿದೆ.

ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದಲ್ಲಿ ತಮ್ಮ ಹಾಗೂ ತಂದೆ, ತಾಯಿಯ ಆಧಾರ್ ಸಂಖ್ಯೆಯೊಂದಿಗೆ ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ. ನೋಂದಣಿಯಾದ ಅರ್ಜಿಗಳನ್ನು ಪರಿಶೀಲಿಸಿದ ನಂತರ ವಿದ್ಯಾರ್ಥಿಗಳ ಖಾತೆಗೆ ನೇರ ನಗದು ವರ್ಗಾವಣೆ ಮಾಡಲಾಗುತ್ತದೆ.

ಯೋಜನೆ ಬಗ್ಗೆ ಎಲ್ಲ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಕಾಲೇಜಿನವರು ಮಾಹಿತಿ ನೀಡಬೇಕು, ಈ ಕುರಿತು ಭಿತ್ತಿಪತ್ರಗಳನ್ನು ಮುದ್ರಿಸಿ, ಕಾಲೇಜಿನ ಆವರಣದಲ್ಲಿ ಅಂಟಿಸಬೇಕೆಂದು ಸರ್ಕಾರ ಸೂಚಿಸಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲೇ ವಿದ್ಯಾರ್ಥಿಗಳಿಗೆ ಈ ಶಿಷ್ಯ ವೇತನ ಲಭ್ಯವಾಗಲಿದೆ. ಪಿಯುಸಿ, ಐಟಿಐ, ಡಿಪ್ಲೋಮಾ ಕಲಿಕೆ ವಿದ್ಯಾರ್ಥಿಗಳಿಗೆ 2500 ರೂ., ವಿದ್ಯಾರ್ಥಿನಿಯರಿಗೆ 3000 ರೂ., ಬಿಎ., ಬಿಎಸ್ಸಿ, ಬಿಕಾಂ ಸೇರಿದಂತೆ ಇನ್ನಿತರೆ ಪದವಿ ವಿದ್ಯಾರ್ಥಿಗಳಿಗೂ ಅನುಕ್ರಮವಾಗಿ 5000 ರೂ.ನಿಂದ 5,500 ರೂ., ಎಲ್‌ಎಲ್‌ಬಿ, ಪ್ಯಾರಾಮೆಡಿಕಲ್ ಹಾಗೂ ಇನ್ನಿತರೆ ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ತಲಾ 7500 ರೂ. ನಿಂದ 8000 ರೂ., ಎಂಬಿಬಿಎಸ್, ಬಿ.ಟೆಕ್ ಮತ್ತು ಇತರೆ ಸ್ನಾತಕೋತ್ತರ ವಿದ್ಯಾಥಿಗಳು ಅನುಕ್ರಮವಾಗಿ 10,000 ರೂ. ಹಾಗೂ 11,000 ರೂ. ವಿದ್ಯಾರ್ಥಿ ವೇತನ ಪಡೆಯಲು ಅರ್ಹತೆ ಹೊಂದಿರುತ್ತಾರೆ.

## ಕೊರೊನಾ ನಡುವೆಯೇ ನ್ಯುಮೋನಿಯ ಲಸಿಕೆಯಲ್ಲಿ ಪ್ರಗತಿ

ನವದೆಹಲಿ, ನ. 12 – ಕೊರೊನಾ ನಡುವೆಯೇ ಅತಿಸಾರ ಹಾಗೂ ನ್ಯುಮೋನಿಯಾಗಳನ್ನು ಎದುರಿಸುವ ಮಕ್ಕಳ ಲಸಿಕೆಯಲ್ಲಿ ಭಾರತ ಪ್ರಗತಿ ಸಾಧಿಸಿದೆ ಎಂದು ಜಾನ್ಸ್ ಹಾಪ್ಕಿನ್ಸ್ ಬ್ಲೂಮ್‌ಬರ್ಗ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್ ವರದಿ ತಿಳಿಸಿದೆ.

ವಿಶ್ವ ನ್ಯುಮೋನಿಯಾ ದಿನವಾದ ಶುಕ್ರವಾರದಂದು ಜಾನ್ಸ್ ಹಾಪ್ಕಿನ್ಸ್‌ನ ಇಂಟರ್‌ನ್ಯಾಷನಲ್ ವ್ಯಾಕ್ಸಿನ್ ಅಕ್ಸೆಸ್ ಸೆಂಟರ್ ಹೆಸರಿನ ವರದಿಯಲ್ಲಿ ಈ ಬಗ್ಗೆ ವಿವರ ನೀಡಲಾಗಿದೆ. ವರದಿಯ ಪ್ರಕಾರ ನ್ಯುಮೋನಿಯ ತಡೆಯುವ ಲಸಿಕೆ ನೀಡಲಾಗುವ ಪ್ರಮಾಣ 2019ರಲ್ಲಿ ಶೇ.15 ಇದ್ದದ್ದು, 2020ರಲ್ಲಿ ಶೇ.21ಕ್ಕೆ ಹೆಚ್ಚಾಗಿದೆ.

ಕಳೆದ ಅಕ್ಟೋಬರ್‌ನಲ್ಲಿ ನ್ಯುಮೋನಿಯಾ ತಡೆಯುವ ಲಸಿಕೆಯನ್ನು ಸಾರ್ವತ್ರಿಕವಾಗಿ ನೀಡುವುದಕ್ಕೆ ಚಾಲನೆ ನೀಡಲಾಗಿದೆ. ದೇಶಾದ್ಯಂತ ಈ ಲಸಿಕೆ ಪ್ರಸಕ್ತ ಲಭ್ಯವಿದೆ.

ನ್ಯುಮೋನಿಯ ಹಾಗೂ ಅತಿಸಾರದಿಂದ ಐದು ವರ್ಷದೊಳಗಿನ ಮಕ್ಕಳು ಸಾವನ್ನಪ್ಪುವ ದೇಶಗಳಲ್ಲಿ ಭಾರತವೇ ಈಗ ಮೊದಲ ಸ್ಥಾನದಲ್ಲಿದೆ. ಪ್ರತಿ ವರ್ಷ 2,33,240 ಮಕ್ಕಳು ಈ ರೋಗಗಳಿಂದ ಸಾವನ್ನಪ್ಪುತ್ತಿದ್ದಾರೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಅತಿಸಾರ ತಡೆಯಲು ನೀಡಲಾಗುವ ರೋಟಾ ವೈರಸ್ ಲಸಿಕೆ ನೀಡುವ ಪ್ರಮಾಣ 2019ರಲ್ಲಿ ಶೇ.53ರಷ್ಟಿದ್ದದ್ದು, 2020ರಲ್ಲಿ ಶೇ.82ಕ್ಕೆ ಹೆಚ್ಚಾಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

## ಯಾತ್ರೆಗೆ ಸಜ್ಜು

**(1ನೇ ಪುಟದಿಂದ)** ನಿರ್ವಹಿಸಲಿದೆ. ಇಲ್ಲಿ ಆನ್‌ಲೈನ್ ಮೂಲಕ ಕಾಯಲು ವ್ಯವಸ್ಥೆ ಮಾಡಲಾಗುವುದು. ಪಂಪದಲ್ಲಿ ವಾಹನಗಳ ನಿಲುಗಡೆಗೆ ವ್ಯವಸ್ಥೆ ಇರುವುದಿಲ್ಲ. ಆದರೆ, ಪಂಪ ನದಿಯಲ್ಲಿ ಸ್ನಾನ ಮಾಡಬಹುದು. ಪಂಪ ಹಾಗೂ ಸನ್ನಿಧಾನದಲ್ಲಿ ಉಳಿಯಲು ಭಕ್ತರಿಗೆ ಅವಕಾಶವಿಲ್ಲ. ದರ್ಶನ ಪೂರ್ಣಗೊಳಿಸಿದವರು ತಕ್ಷಣ ಅಲ್ಲಿಂದ ಹೊರಡಬೇಕಿದೆ.

ಡಿಸೆಂಬರ್ 26ರಂದು 41 ದಿನಗಳ ಮಂಡಳ ಪೂಜೆ ಉತ್ಸವ ಪೂರ್ಣಗೊಳ್ಳಲಿದೆ. ಡಿಸೆಂಬರ್ 30ರಂದು ಮಕರವಿಳಕ್ಕು ಯಾತ್ರೆಗಾಗಿ ಮತ್ತೆ ದೇವಾಲಯ ತೆರೆಯಲಾಗುವುದು. ಜನವರಿ 20ರಂದು ದೇವಾಲಯವನ್ನು ಮತ್ತೆ ಮುಚ್ಚಲಾಗುವುದು.

## ಕೊರೊನಾ 'ವಿಶೇಷ' ರೈಲುಗಳ ಹಣೆಪಟ್ಟಿ ತೆಗೆದ ರೈಲ್ವೆ

ನವದೆಹಲಿ, ನ. 12 – ಮೇಲ್ ಹಾಗೂ ಎಕ್ಸ್‌ಪ್ರೆಸ್ ರೈಲುಗಳಿಗೆ ಇರುವ 'ವಿಶೇಷ' ಎಂಬ ಹಣೆಪಟ್ಟಿ ತೆಗೆದು ಹಾಕಿ, ಪ್ರಯಾಣ ದರವನ್ನು ಕೊರೊನಾ ಪೂರ್ವದ ದಿನಗಳಂತೆ ನಿಗದಿ ಪಡಿಸಲು ರೈಲ್ವೆ ಆದೇಶ ಹೊರಡಿಸಿದೆ.

ಕೊರೊನಾ ನಂತರ ರೈಲ್ವೆ ವಿಶೇಷ ರೈಲುಗಳನ್ನು ಮಾತ್ರ ಓಡಿಸುತ್ತಿದೆ. ಇದರಿಂದಾಗಿ ಜನರು ಅಲ್ಪ ದೂರದ ಪ್ರಯಾಣಗಳಿಗೂ ಹೆಚ್ಚಿನ ದರ ಪಾವತಿಸಬೇಕಿತ್ತು.

ಈ ಬಗ್ಗೆ ರೈಲ್ವೆ ವಲಯಗಳಿಗೆ ಪತ್ರ ಬರೆದಿರುವ ರೈಲ್ವೆ ಮಂಡಳಿ, ಇನ್ನು ಮುಂದೆ ಸಾಮಾನ್ಯ ರೈಲುಗಳನ್ನು ಓಡಿಸಬೇಕು ಹಾಗೂ ಕೊರೊನಾ ಪೂರ್ವದ ದರ ನಿಗದಿ ಪಡಿಸಬೇಕು ಎಂದು ತಿಳಿಸಿದೆ.

# ಹರಿಹರದ ಊರಮ್ಮ ದೇವಿ ಜಾತ್ರಾ ಮಹೋತ್ಸವದ ಅಧ್ಯಕ್ಷರಾಗಿ ಕೆ. ಅಣ್ಣಪ್ಪ



ಹರಿಹರ, ನ.12- ಮುಂದಿನ ಮಾರ್ಚ್ 22 ರಂದು ನಡೆಯುವ ಗ್ರಾಮದೇವತೆ ಊರಮ್ಮ ದೇವಿಯ ಜಾತ್ರಾ ಮಹೋತ್ಸವದ ಅಧ್ಯಕ್ಷರಾಗಿ ಕೆ. ಅಣ್ಣಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಬೆಣ್ಣೆ ರೇವಣಸಿದ್ದಪ್ಪ, ಖಜಾಂಚಿಯಾಗಿ ಶೇರಾಪುರ ರಾಜಪ್ಪ ಮತ್ತು ಸಹ ಕಾರ್ಯದರ್ಶಿಯಾಗಿ ಪಾಲಾಕ್ಷಪ್ಪ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಕಸಬಾ ಗ್ರಾಮದೇವತೆ ದೇವಸ್ಥಾನದ ಆವರಣದಲ್ಲಿ ಊರಮ್ಮ ದೇವಿಯ ಜಾತ್ರೆ ನಿಮಿತ್ತವಾಗಿ ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್ ಮತ್ತು ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪ ಹಾಗೂ ನಗರದ ಪ್ರಮುಖ ಮುಖಂಡರ ನೇತೃತ್ವದಲ್ಲಿ ಇಂದು ನಡೆದ ಮಹತ್ವದ ಸಭೆಯಲ್ಲಿ ಮುಂಬರುವ ಗ್ರಾಮದೇವತೆ ಊರಮ್ಮ ದೇವಿಯ ಜಾತ್ರಾ ಮಹೋತ್ಸವ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರಾಗಿ ಕೆ. ಅಣ್ಣಪ್ಪ, ಪ್ರಧಾನ ಕಾರ್ಯದರ್ಶಿ ಬೆಣ್ಣೆ ರೇವಣಸಿದ್ದಪ್ಪ, ಖಜಾಂಚಿ ಶೇರಾಪುರ ರಾಜಪ್ಪ ಹಾಗೂ ಸಹ ಕಾರ್ಯದರ್ಶಿಯಾಗಿ ಪಾಲಾಕ್ಷಪ್ಪ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಎರಡೂ ಗ್ರಾಮಗಳ ಅಧ್ಯಕ್ಷರು ಘೋಷಣೆ ಮಾಡಿದರು. ನಂತರದಲ್ಲಿ ಜಾತ್ರೆಯ ಡಬ್ಬಿ ಗಡಿಗೆಗೆ ಪೂಜೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪ, ಮುಖಂಡರಾದ ಕೆ. ಜಡಿಯಪ್ಪ, ಗೌಡ್ರು ಪುಟ್ಟಪ್ಪ, ಜಿ.ನಂಜಪ್ಪ, ವೈ.ಎನ್. ಮಹೇಶ್, ಪೂಜಾರ್ ವೀರಣ್ಣ, ಬಾಸಿಂಗದರ ಸಿದ್ದಪ್ಪ, ಕೆ.ಬಿ. ರಾಜಶೇಖರ್, ಬೆಳಕೇರಿ ಚಂದ್ರಪ್ಪ, ಡಿ. ಸಿದ್ದೇಶ್, ಜಗದೀಶ್ ಚೂರಿ, ರೇವಣಪ್ಪ, ಕಂಚಿಕೇರಿ ಕರಿಬಸಪ್ಪ, ಸುರೇಶ್ ಚಂದಾಪೂರ್, ಎಂ. ಆರ್. ಚಂದ್ರಶೇಖರ್, ಪರಶುರಾಮ ಕಾಟ್ವೆ, ಬೆಣ್ಣೆ ಸಿದ್ದಪ್ಪ, ಹರಪನಹಳ್ಳಿ ಬಸವರಾಜಪ್ಪ, ನಲ್ಲಿ ಬಸವರಾಜಪ್ಪ, ರಾಖೇಶ್, ಮುದೇಗೌಡ್ರು ಹನುಮಂತಪ್ಪ, ಪತ್ರಕರ್ತ ಎಂ. ಚಿದಾನಂದ ಕಂಚಿಕೇರಿ, ಪೂಜಾರ್ ರುದ್ರೇಶ್ ಉಪಸ್ಥಿತರಿದ್ದರು.

ಗುತ್ಯಪ್ಪ, ಹಳ್ಳದಕೇರಿ ನಿಜಗುಣ, ವಸಂತಕುಮಾರ್, ಗಿರೀಶ್, ಪಾಲಾಕ್ಷಪ್ಪ ಮಜ್ಜಿಗೆ, ಹೇಮಣ್ಣ ಪೂಜಾರ್, ಹಣಿಗಿ ಹೊನ್ನಪ್ಪ, ಕೆಂಚಪ್ಪ, ದೇವರಾಜ್, ರಾಘವೇಂದ್ರ ಹಳ್ಳದಕೇರಿ, ಹನುಮಂತಪ್ಪ ಎಕ್ಕನಹಳ್ಳಿ, ಸಿಂಗಾಡಿ ಕೃಷ್ಣ, ಐರಣಿ ಮಹೇಶ್, ಶಾನಭೋಗ ಹರೀಶ್, ನಾರಾಯಣ ಜೋಯಿಸರು, ಚಿದಂಬರ ಜೋಯಿಸರು, ಹರಿಶಂಕರ್ ಜೋಯಿಸರು, ಅರ್ಚಕರಾದ ಮಾನಪ್ಪ ಆಚಾರ್, ವೀರೇಶ್ ಆಚಾರ್, ನಾಗರಾಜ್ ಆಚಾರ್, ಜನಾರ್ಧನ್ ಆಚಾರ್ ಇನ್ನಿತರರು ಹಾಜರಿದ್ದರು.

## ನೀತಿ ಸಂಹಿತೆಗಳಿಂದ ಅಭಿವೃದ್ಧಿಗಳು ಕುಂಠಿತ

**(1ನೇ ಪುಟದಿಂದ)** ಪರಿಶ್ರಮದ ಫಲವು ರೈತರ ಮೊಗದಲ್ಲಿ ಮಂದಹಾಸದ ಮೂಡಿಸಿದೆ. 1721ರಲ್ಲಿ ಭರಮಣ್ಣನಾಯಕ ಭರಮಸಾಗರದ ಕೆರೆ ಕಟ್ಟಿಸಿದ್ದರು. ಆ ಕೆರೆಗೆ 2021 ರಲ್ಲಿ ಅಂದರೆ, 300 ವರ್ಷಗಳ ಬಳಿಕ ಕೆರೆಯ ಒಡಲಿಗೆ ನೀರು ತುಂಬಿಸಿರುವುದು ಅತೀವ ಸಂತಸ ನೀಡಿದೆ ಎಂದು ಹೇಳಿದರು.

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಜಗಳೂರು ಶಾಸಕ ಎಸ್.ವಿ.ರಾಮಚಂದ್ರಪ್ಪ ಮಾತನಾಡಿ, ತರಳಬಾಳು ಜಗದ್ಗುರುಗಳು ಕಾಲಿಟ್ಟ ನಾಡು ಬಂಗಾರವಾಗಿದೆ ಎಂದರು.

ಸಂಸದ ಜಿ.ಎಂ ಸಿದ್ದೇಶ್ವರ ಮಾತನಾಡಿ, ಕರ್ನಾಟಕದಲ್ಲಿ ಅತಿ ಹೆಚ್ಚು ನೀರಾವರಿ ಯೋಜನೆಗಳಿಗೆ ಒತ್ತು ಕೊಟ್ಟುವರು ಸಿರಿಗೆರೆ ಶ್ರೀಗಳು ಎಂದರು.

ಮಾಜಿ ಶಾಸಕ ಎಚ್.ಪಿ ರಾಜೇಶ್, ತಾಲ್ಲೂಕು ಸಾಧು ಲಿಂಗಾಯತ ಸಮಾಜದ ಅಧ್ಯಕ್ಷ ಬಂದೋಳ್ ಮಂಜುನಾಥ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮಹಾಬಲೇಶ್ವರ ಗೌಡ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಪಾಟೀಲ್ ಕೆಂಚನಗೌಡ, ಗ್ರಾಮ ಪಂಚಾಯಿತಿ ಅಧ್ಯಕ್ಷ ಶಿವಣ್ಣ, ಕಾಂಗ್ರೆಸ್ ಎಸ್.ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ, ಮುಖಂಡರಾದ ಚಿಕ್ಕಮ್ಮನಟ್ಟಿ ದೇವೇಂದ್ರಪ್ಪ, ಎಂ.ಬಿ ಯಶವಂತ್ ಗೌಡ, ದ್ಯಾಮನಗೌಡ, ಅಣಜಿಗೇರಿ ಭರಮನಗೌಡ್ರು, ಮಲ್ಲಿಕಾರ್ಜುನ, ಉಚ್ಚಂಗಿ ದುರ್ಗದ ಜಯಣ್ಣ, ಫಣಿಯಾಪುರ ನಿಂಗರಾಜ, ತುಂಬಿಗೆರೆ ದ್ಯಾಮನಗೌಡ್ರು, ಚನ್ನಬಸಪ್ಪ ಸೇರಿದಂತೆ ಇತರರು ಇದ್ದರು.


# ಡಾ. ಕಿರುವಾಡಿ ಚಂದ್ರಶೇಖರ್ ನಿಧನ



ದಾವಣಗೆರೆ ಕುವೆಂಪು ರಸ್ತೆ (ಲಾಯರ್ ರೋಡ್) ವಾಸಿ,
ಜಜಮು ವೈದ್ಯಕೀಯ ಮಹಾವಿದ್ಯಾಲಯದ
ಮೆಡಿಸಿನ್ ವಿಭಾಗದ ನಿವೃತ್ತ ಮುಖ್ಯಸ್ಥರೂ,
ಲಿಂ. ಕಿರುವಾಡಿ ವೀರಬಸಪ್ಪನವರ ಪುತ್ರರೂ ಆದ

**ಡಾ. ಕಿರುವಾಡಿ ಚಂದ್ರಶೇಖರ್**

ಅವರು ದಿನಾಂಕ 12.11.2021ರ ಶುಕ್ರವಾರ ತಡ ರಾತ್ರಿ 1.15ರ ಸಮಯದಲ್ಲಿ ನಿಧನರಾದರು. ಮೃತರಿಗೆ ಸುಮಾರು 63 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸಹೋದರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 13.11.2021ರ ಶನಿವಾರ ಮಧ್ಯಾಹ್ನ 2 ಗಂಟೆಗೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**


## ಶೆಟ್ಟರ್ ತುರ್ತು ದೆಹಲಿಗೆ

**(1ನೇ ಪುಟದಿಂದ)** ಯಡಿಯೂರಪ್ಪ ಅವರ ಆಪ್ತ ಹಾಗೂ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ ತಮ್ಮ ನಿವಾಸದಲ್ಲಿ ಕೆಲವು ಶಾಸಕರನ್ನು ಸೇರಿಸಿ, ಸಭೆ ನಡೆಸಿದರು.

ಈ ಸಭೆಗೆ ಜಗದೀಶ್ ಶೆಟ್ಟರ್ ಅವರನ್ನೂ ಆಹ್ವಾನ ಮಾಡಿದ್ದರು, ದೆಹಲಿ ಬೆಳವಣಿಗೆ ಬಗ್ಗೆ ರಾಜ್ಯ ಬಿಜೆಪಿ ಮುಖಂಡರುಗಳಿಗೆ ನಾಯಕತ್ವ ಬದಲಾವಣೆ ಸಾಧ್ಯತೆ ಸುದ್ದಿ ಮುಟ್ಟಿರಬಹುದು, ಇದರ ಬೆನ್ನಲ್ಲೇ ರೇಣುಕಾಚಾರ್ಯ ತರಾತುರಿಯಲ್ಲಿ ಸಭೆ ನಡೆಸಿದ್ದರು ಎನ್ನಲಾಗಿದೆ.

## ಕೊರೊನಾ ವಿಮೆಯಲ್ಲಿ ಖಾಸಗಿ ವೈದ್ಯರಿಲ್ಲ ಕ್ರಮಕ್ಕಾಗಿ ಸುಪ್ರೀಂ ಕೋರ್ಟ್ ಸೂಚನೆ

ನವದೆಹಲಿ, ನ. 12 – ಖಾಸಗಿ ಆಸ್ಪತ್ರೆಗಳಲ್ಲಿ ಕೊರೊನಾ ರೋಗಿಗಳಿಗೆ ಚಿಕಿತ್ಸೆ ನೀಡುವಾಗ ಸಾವನ್ನಪ್ಪಿದ ವೈದ್ಯರು ಹಾಗೂ ಆರೋಗ್ಯ ಕಾರ್ಯಕರ್ತರನ್ನು ವಿಮೆ ಯೋಜನೆಯಲ್ಲಿ ಸೇರ್ಪಡೆ ಮಾಡಿಕೊಳ್ಳದೇ ಇರುವುದರಿಂದ ಉಂಟಾಗಿರುವ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ತಿಳಿಸಿದೆ.

ಕೊರೊನಾದಿಂದ ಸಾವನ್ನಪ್ಪುವ ಆರೋಗ್ಯ ಕಾರ್ಯಕರ್ತರಿಗೆ 50 ಲಕ್ಷ ರೂ. ಪರಿಹಾರ ನೀಡುವುದಾಗಿ ಕೇಂದ್ರ ಸರ್ಕಾರ ಈ ಹಿಂದೆ ತಿಳಿಸಿತ್ತು.

ಈ ವಿಷಯವನ್ನು ವಿಮಾ ಕಂಪನಿಗಳ ಜೊತೆಗೂಡಿ ಬಗೆಹರಿಸಿಕೊಳ್ಳಬೇಕು. ಕೇಂದ್ರ ಸರ್ಕಾರದ ಅಂತಿಮ ನೀತಿ ಜನರ ಕಲ್ಯಾಣವಾಗಿರಬೇಕೇ ಹೊರತು, ಇದನ್ನು ಆಯ್ದ ಕೆಲವರಿಗೆ ಸೀಮಿತ ಮಾಡಬಾರದು ಎಂದು ನ್ಯಾಯಾಲಯ ಹೇಳಿದೆ. ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಹಾಗೂ ಎ.ಎಸ್.. ಬೋಪಣ್ಣ ಅವರಿದ್ದ ಪೀಠ ಈ ಸೂಚನೆ ನೀಡಿದೆ.

ಈ ಬಗ್ಗೆ ಪರಿಶೀಲಿಸಿ ಕ್ರಮ ತೆಗದುಕೊಳ್ಳುವುದಾಗಿ ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಸಾಲಿಸಿಟರ್ ಜನರಲ್ ತುಶಾರ್ ಮೆಹ್ತ ಹೇಳಿದ್ದಾರೆ

## ನಗರದಲ್ಲಿ ಇಂದು ನಾಮದೇವ ಸಿಂಪಿ ಸಮಾಜ ದೈವ ಮಂಡಳಿ ಸಭೆ

ದೊಡ್ಡಪೇಟೆಯ ನಾಮದೇವ ಸಿಂಪಿ ಸಮಾಜ ದೈವ ಮಂಡಳಿಯ ಸರ್ವ ಸದಸ್ಯರ ಮಹಾಸಭೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ದೊಡ್ಡಪೇಟೆಯ ಶ್ರೀ ನಾಮದೇವ ಭಜನಾ ಮಂದಿರದಲ್ಲಿ ಕರೆಯಲಾಗಿದೆ.

ದೈವ ಮಂಡಳಿಯ ಅಧ್ಯಕ್ಷ ಜಗನ್ನಾಥ ಎಸ್. ಗಂಜೀಗಟ್ಟಿ ಅವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿರುವ ಈ ಸಭೆಗೆ ಸಮಾಜದ ಬಂಧುಗಳು ಭಾಗವಹಿಸುವಂತೆ ಪ್ರಧಾನ ಕಾರ್ಯದರ್ಶಿ ಮನೋಹರ ವಿ. ಬೊಂಗಾಳೆ ಕೋರಿದ್ದಾರೆ.

# ಕಾನೂನುಗಳಿದ್ದರೂ ನ್ಯಾಯಕ್ಕಾಗಿ ಆಗ್ರಹಿಸುವ ಸಂಘ-ಸಂಸ್ಥೆಗಳ ಅಗತ್ಯವಿದೆ

### ಹರಿಹರದ ಸಭೆಯಲ್ಲಿ ದಸಂಸ ರಾಜ್ಯ ಸಂಚಾಲಕ ಎಂ. ಗುರುಮೂರ್ತಿ ಅಭಿಪ್ರಾಯ



ಹರಿಹರ, ನ.12- ಸಂವಿಧಾನ, ಕಾನೂನುಗಳಿದ್ದರೂ ಕೂಡ ನ್ಯಾಯಕ್ಕೆ ಆಗ್ರಹಿಸುವ ಸಂಘ, ಸಂಸ್ಥೆಗಳ ಅಗತ್ಯ ಈ ದೇಶಕ್ಕಿದೆ ಎಂದು ದಸಂಸ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ರಾಜ್ಯ ಸಂಚಾಲಕ ಎಂ. ಗುರುಮೂರ್ತಿ ಹೇಳಿದರು.

ನಗರದ ಪ್ರವಾಸಿ ಮಂದಿರದಲ್ಲಿ ಮೊನ್ನೆ ನಡೆದ ದಸಂಸ ನೂತನ ತಾಲ್ಲೂಕು ಸಮಿತಿ ರಚನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಭಾರತೀಯರ ಮನಸ್ಥಿತಿಯನ್ನು ಅರಿತ ಡಾ.ಅಂಬೇಡ್ಕರ್ ಅವರು ಜಗತ್ತಿನ ಅತಿ ದೊಡ್ಡ ಲಿಖಿತ ಸಂವಿಧಾನವನ್ನು ಭಾರತಕ್ಕೆ ನೀಡಿದ್ದಾರೆ. ಈ ವಿಶಿಷ್ಟ ಸಂವಿಧಾನವನ್ನಾಧರಿಸಿ ದೇಶದಲ್ಲಿ ನೂರಾರು ಕಾನೂನುಗಳನ್ನು ರಚಿಸಲಾಗಿದೆ. ಇದರಲ್ಲಿ ದಲಿತ, ಶೋಷಿತ, ಮಹಿಳೆ, ಮಕ್ಕಳು, ಬಡವರ ರಕ್ಷಣೆಗೆ ಕಾನೂನುಗಳಿವೆ ಎಂದರು.

ಕಾನೂನುಗಳಿವೆ ಎಂದು ಕೈಕಟ್ಟಿ ಕುಳಿತುಕೊಳ್ಳಲಾಗದು. ಅಧಿಕಾರಕ್ಕೆ ಬರುವ ಸರ್ಕಾರ, ಅಧಿಕಾರಿಗಳು, ಸಂವಿಧಾನ, ಕಾನೂನು ಬದಿಗೆ ಸರಿಸಿ ಅಥವಾ ಅದರ ಕಣ್ಣಿಗೆ ಮಣ್ಣೆರಚಿ ದುರ್ಬಲರನ್ನು ಹಕ್ಕನ್ನು ಕಸಿಯುವ ಅಪಾಯ ಇದ್ದೇ, ಇದೆ. ಸರ್ಕಾರ ಹಾಗೂ ಅಧಿಕಾರಿಗಳು ದಾರಿ ತಪ್ಪದಂತೆ ಎಚ್ಚರ ವಹಿಸಲು ದಲಿತರ, ದುರ್ಬಲರ ಹಕ್ಕುಗಳ ರಕ್ಷಣೆಗಾಗಿ ಸಂಘ, ಸಂಸ್ಥೆಗಳು, ಹೋರಾಟಗಳು ಈ ದೇಶಕ್ಕೆ ಅಗತ್ಯವಾಗಿದೆ ಎಂದು ಪ್ರತಿಪಾದಿಸಿದರು.

ಚಲನಚಿತ್ರ ನಿರ್ದೇಶಕ, ದ್ರಾವಿಡ ಚಳವಳಿ ಮುಖಂಡ ಅಭಿಗೌಡ್ರು ಮಂಡ್ಯ ಮಾತನಾಡಿ, ಈ ಹೋರಾಟವನ್ನು ಒಡೆಯಲು ಕೆಲವು ಪಟ್ಟಭದ್ರರು ಮಾಡುತ್ತಿರುವ ಕುತಂತ್ರದ ಬಗ್ಗೆ ಎಚ್ಚರಿಕೆ ವಹಿಸಬೇಕಾಗಿದೆ ಎಂದರು.

ಜಿಲ್ಲಾ ಸಂಚಾಲಕ ಕುಂದುವಾಡ ಮಂಜುನಾಥ್, ತಾಲ್ಲೂಕು ಸಂಚಾಲಕರಾಗಿ ಪುನರ್ ಆಯ್ಕೆಯಾದ ಪಿ.ಜೆ. ಮಹಾಂತೇಶ್ ಮಾತನಾಡಿದರು.

**ನೂತನ ತಾಲ್ಲೂಕು ಸಮಿತಿ:** ಪಿ.ಜೆ.ಮಹಾಂತೇಶ್ (ತಾಲ್ಲೂಕು ಸಂಚಾಲಕರಾಗಿ ಪುನರ್ ಆಯ್ಕೆ). ರವಿಕುಮಾರ್ (ನಗರ ಸಂಚಾಲಕ), ಸಂತೋಷ್ ಎಸ್.ವಿ. ನಂದಿಗಾವಿ, ಪ್ರದೀಪ್ ಜಿಗಳಿ, ಹನುಮಂತಪ್ಪ ಕೆ.ಎನ್.ಹಳ್ಳಿ, ಕರಿಬಸಪ್ಪ ನಿಟ್ಟೂರು, ರವಿ ಸಾರಥಿ, ರಂಗನಾಥ್, ಆಂಜಿ ಬೆಳ್ಳೂಡಿ, ರಾಘವೇಂದ್ರ ಹರಳಹಳ್ಳಿ, ಕಡ್ಲೆಗೊಂದಿ ಮಾಲತೇಶ್ ಬಿ.ಎಚ್., ಅಣ್ಣಪ್ಪ, ಕೊಟ್ರೇಶ್ ನಂದಿಗಾವಿ, ಯುವರಾಜ ಹೊಸಪಾಳ್ಯ, ಚೌಡಪ್ಪ ಭಾನುವಳ್ಳಿ, ಹನುಮಂತಪ್ಪ ಗುಳದಹಳ್ಳಿ, (ತಾಲ್ಲೂಕು ಸಂಘಟನಾ ಸಂಚಾಲಕರು). ಪ್ರವೀಣ್ ಬೆಳ್ಳೂಡಿ (ಖಜಾಂಚಿ). ಭಾನುವಳ್ಳಿ ಚೌಡಮ್ಮ, ರತ್ನಮ್ಮ (ಮಹಿಳಾ ಸಂಚಾಲಕಿಯರು).

ಮಂಜುನಾಥ್ ವಾಸನ (ಮಲೇಬೆನ್ನೂರು ಸಂಚಾಲಕರು). ಜಯಪ್ಪ ಜಿಗಳಿ, ಬಸವರಾಜ್ ಹರಳಹಳ್ಳಿ, ಗುಡ್ಡಪ್ಪ ಮಲ್ಲನಾಯಕನಹಳ್ಳಿ, ಮಹೇಶ್ ನಿಟ್ಟೂರು, ಯಲವಟ್ಟಿ ಕೀರ್ತಿರಾಜ್, ಅಂಜನಿ, ಧರ್ಮರಾಜ್, ಹನುಮಂತಪ್ಪ ಹಳ್ಳಿಹಾಳ್, ಹನುಮಂತಪ್ಪ ಕೊಕ್ಕನೂರು, ಮಂಜುನಾಥ್ ಕಿರಣ್ (ಹೋಬಳಿ ಸಂಘಟನಾ ಸಂಚಾಲಕರು), ರಾಕೇಶ್ ಜಿಗಳಿ (ಖಜಾಂಚಿ).

ಜಿಲ್ಲಾ ಮಹಿಳಾ ಸಂಚಾಲಕರಾದ ವಿಜಯಲಕ್ಷ್ಮಿ, ರವಿ ಶಿವಮೊಗ್ಗ, ನಿಟ್ಟೂರು ಕೃಷ್ಣಪ್ಪ, ಗ್ರಾ.ಪಂ. ಸದಸ್ಯರಾದ ಎಚ್.ಎಂ. ಹನುಮಂತಪ್ಪ, ಕೊಕ್ಕನೂರು ಹನುಮಂತಪ್ಪ, ಗುಳದಹಳ್ಳಿ ಮಂಜಪ್ಪ, ನಿಟ್ಟೂರು ಮಂಜಪ್ಪ, ಗದಿಗೆಪ್ಪ ವಾಸನ ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ತ್ರಿಪುರ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯ ಖಂಡಿಸಿ ಪ್ರತಿಭಟನೆ

### ಹರಪನಹಳ್ಳಿ



ಹರಪನಹಳ್ಳಿ, ನ.12- ತ್ರಿಪುರ ರಾಜ್ಯದಲ್ಲಿ ಅಲ್ಪಸಂಖ್ಯಾತರ ಮೇಲೆ ಆಗುತ್ತಿರುವ ದೌರ್ಜನ್ಯ ಖಂಡಿಸಿ ತಂಜೀಮ್ ಉಲಮಾ ಎ ಅಹ್ಲೆ ಸುನ್ನತ್ ಹಾಗೂ ಅಂಜುಮನ್ ಸಮಿತಿ ವತಿಯಿಂದ ಪ್ರತಿಭಟನೆ ಮಾಡಿ ಉಪವಿಭಾಗಾಧಿಕಾರಿಗಳಿಗೆ ಹಾಗೂ ತಹಶೀಲ್ದಾರರಿಗೆ ಮನವಿ ಸಲ್ಲಿಸಲಾಯಿತು

ಈ ವೇಳೆ ಖಾಜಿ ಮುಷ್ತಾಕ್ ಅಹಮದ್ ರಜ್ವಿ ಮಾತನಾಡಿ, ತ್ರಿಪುರಾದಲ್ಲಿ ಕೆಲ ಸಂಘಟನೆಯವರು ದೌರ್ಜನ್ಯ ನಡೆಸುತ್ತಿದ್ದು, ಅಪರಾಧಿಗಳನ್ನು ಕೂಡಲೇ ಬಂಧಿಸಬೇಕು. ತ್ರಿಪುರ ಸರ್ಕಾರವನ್ನು ವಜಾಗೊಳಿಸಬೇಕು. ಮುಸ್ಲಿಮರಿಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದರು.

ಅಂಜುಮನ್ ಸಂಸ್ಥೆಯ ಮಾಜಿ ಅಧ್ಯಕ್ಷ ಸಿ. ಜಾವೀದ್ ಮಾತನಾಡಿದರು.

ಮೌಲಾನಾ ಅಬು ಸಾಲೇಹ ಮುಜೀಬಿ, ಮೌಲಾನಾ ಗುಲಾಮ್ ರಬ್ಬಾನಿ ರಜ್ವಿ, ಮೌಲಾನಾ ಮುಕ್ತರ್ ಆಲಮ್ ಮಿಸ್ಬಾಹಿ, ಮೌಲಾನಾ ಹೈದರ್ ಆಲಿರಜ್ವಿ, ಮೌಲಾನಾ ಇಮ್ತಿಯಾಜ್ ಖಾನ್ ನಿಜಾಮಿ, ಹಫೀಜ್ ಸಯೀದ್ ರಜಾ ರಜ್ವಿ, ಮುಖಂಡರಾದ ಹಾಜಿ ಷಮ್ನಾಸಾಬ್, ಇರ್ಫಾನ್ ಅಹಮದ್, ಹಾಜಿ ಷರೀಫ್ ಸಾಬ್, ಬಾಣಗೇರಿ ಮುತುವಲ್ಲಿ ಇಸ್ಮಾಯಿಲ್ ಸಾಬ್ ಮತ್ತು ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಮಲೇಬೆನ್ನೂರಿನ ನಂದಿ ಸೌಹಾರ್ದ ಸಹಕಾರಿಗೆ 29 ಲಕ್ಷ ರೂ. ನಿವ್ವಳ ಲಾಭ



ಮಲೇಬೆನ್ನೂರು, ನ.12- ಇಲ್ಲಿನ ಶ್ರೀ ನಂದಿ ಪತ್ತಿನ ಸಹಕಾರ ಸಂಘವು ಶ್ರೀ ನಂದಿ ಸೌಹಾರ್ದ ಸಹಕಾರಿ ನಿಯಮಿತವಾಗಿ ಪರಿವರ್ತನೆಗೊಂಡ ನಂತರ 2ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ನಾಳೆ ಮಧ್ಯಾಹ್ನ 3 ಗಂಟೆಗೆ ಶ್ರೀ ರಾಜರಾಜೇಶ್ವರಿ ವಿದ್ಯಾಸಂಸ್ಥೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಹಕಾರಿ ಅಧ್ಯಕ್ಷ ಹಳ್ಳಿಹಾಳ್ ಹೆಚ್. ವೀರನಗೌಡ ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, 2020-21 ಸಾಲಿನಲ್ಲಿ ಸಹಕಾರಿಯು 41,59,38,489 ಕೋಟಿ ರೂ. ವ್ಯವಹರಿಸಿದ್ದು, 29,12,256 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ. ದಾವಣಗೆರೆ ಮತ್ತು ಹಾವೇರಿ ಜಿಲ್ಲೆಯ ಎಲ್ಲಾ ಪ್ರದೇಶಗಳು ನಮ್ಮ ಸಹಕಾರಿಯ ಕಾರ್ಯಕ್ಷೇತ್ರವಾಗಿದ್ದು, 2,806 ಸದಸ್ಯರನ್ನು ಹಾಗೂ 69,86,300 ಲಕ್ಷ ರೂ. ಷೇರು ಹಣ ಹೊಂದಿರುತ್ತದೆ ಎಂದು ಹೇಳಿದರು.

ಕೊರೊನಾ ಸಂಕಷ್ಟದ ನಡುವೆಯೂ ಈ ಆರ್ಥಿಕ ವರ್ಷದಲ್ಲಿ 1,49,45,864 ಕೋಟಿ ರೂ. ಠೇವಣಿ ಸಂಗ್ರಹಿಸಿದ್ದು, ಒಟ್ಟು 10,44,25,888 ಕೋಟಿ ರೂ. ಠೇವಣಿ ಹಣ ಸಹಕಾರಿಯಲ್ಲಿದೆ. ಠೇವಣಿ ಮಾಡಿದ ಸದಸ್ಯರಿಗೆ ಹಾಗೂ ಗ್ರಾಹಕರಿಗೆ ನಾವು ಆಭಾರಿಯಾಗಿದ್ದೇವೆ ಎಂದರು.

ಸದಸ್ಯರಿಗೆ ಮತ್ತು ಗ್ರಾಹಕರಿಗೆ 8,28,43,040 ಕೋಟಿ ರೂ. ಗಳನ್ನು ವಿವಿಧ ಉದ್ದೇಶಗಳಿಗೆ ಸಾಲ ನೀಡಿದ್ದು, ಈ ಸಾಲಿನಲ್ಲಿ 65,70,335 ಲಕ್ಷ ರೂ. ಸುಸ್ತಿ ಬಾಕಿ ಇದೆ. ಈ ಸಂಬಂಧ 21 ಜನರಿಗೆ ನೋಟಿಸ್ ನೀಡಲಾಗಿದೆ. ಒಟ್ಟು 14,72,45,574 ಕೋಟಿ ರೂ. ದುಡಿಯುವ ಬಂಡವಾಳ ಹೊಂದಿರುವ ಸಹಕಾರಿಯು ಈ ವರ್ಷ ಸದಸ್ಯರಿಗೆ ಲಾಭಾಂಶದಲ್ಲಿ ಶೇ. 11 ರಷ್ಟು ಡಿವಿಡೆಂಡ್ ನೀಡಲು ಉದ್ದೇಶಿಸಿದೆ ಎಂದು ಹೆಚ್. ವೀರನಗೌಡ ತಿಳಿಸಿದರು.

ಸಹಕಾರಿಯ ಹಿರಿಯ ನಿರ್ದೇಶಕ ಜಿಗಳಿಯ ಇಂದೂಧರ್, ಕಾರ್ಯದರ್ಶಿ ಹೆಚ್.ಎಂ. ಬಸವರಾಜ್ ಈ ವೇಳೆ ಹಾಜರಿದ್ದರು.

## 15ನೇ ವಾರ್ಡ್‌ನಲ್ಲಿ ಪುನೀತ್‌ಗೆ ಶ್ರದ್ಧಾಂಜಲಿ



ದಾವಣಗೆರೆ, ನ. 12- ನಗರದ 15ನೇ ವಾರ್ಡ್ ನ ದೇವರಾಜ ಅರಸು ಬಡಾವಣೆಯಲ್ಲಿ ಪುನೀತ್ ರಾಜ್‌ಕುಮಾರ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಮೇಣದ ಬತ್ತಿ ಹಿಡಿದು ಬಡಾವಣೆಯ ಮಕ್ಕಳೊಂದಿಗೆ ಶ್ರದ್ಧಾಂಜಲಿ ಸಲ್ಲಿಸಿ, ಮೌನಾಚರಣೆ ಮಾಡಲಾಯಿತು.

ವಾರ್ಡ್ ನ ಸದಸ್ಯರಾದ ಶ್ರೀಮತಿ ಆಶಾ ಉಮೇಶ್, ಕೆ.ಎಂ. ವೀರಯ್ಯ ಸ್ವಾಮಿ, ನಟರಾಜ್, ಕುಮಾರ್, ಮಂಜು ಸೋಲಾರ್, ರಘು, ದುರ್ಗೇಶ್, ಪರಮೇಶ್ವರಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಲಯನ್ಸ್ ಭವನದಲ್ಲಿ ಶ್ರದ್ಧಾಂಜಲಿ



ದಾವಣಗೆರೆ, ನ. 12- ನಗರದ ಲಯನ್ಸ್ ಭವನದಲ್ಲಿ ಪುನೀತ್ ರಾಜಕುಮಾರ್ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್. ಓಂಕಾರಪ್ಪ, ಖಜಾಂಚಿ ಕಣವಿ ನಟರಾಜ್, ಜಂಟಿ ಕಾರ್ಯದರ್ಶಿ ಎಸ್.ಕೆ. ಮಲ್ಲಿಕಾರ್ಜುನ್, ಬೆಳ್ಳೂಡಿ ಶಿವಕುಮಾರ್, ಪ್ರತಾಪ್, ಹೆಚ್.ವಿ. ಮಂಜುನಾಥ ಸ್ವಾಮಿ, ದೇವರಮನೆ ನಾಗರಾಜ್, ಸಜ್ಜನ ನಾಗರಾಜ್, ಸಿದ್ದೇಶ್, ಸ್ವಾಗಿ ಮುರಿಗೇಶ್, ಅಜಯ್ ನಾರಾಯಣ ಮತ್ತು ಇತರರು ಭಾಗವಹಿಸಿದ್ದರು.

## ಸಂಕ್ಲೀಪುರ : ಮಹಿಳೆಗೆ ನೆರವು



ಮಲೇಬೆನ್ನೂರು, ನ.12 - ಸಂಕ್ಲೀಪುರ ಗ್ರಾಮದ ಶ್ರೀ ಮಾಯಾಂಬಿಕೆ ಮಹಿಳಾ ಸ್ವ-ಸಹಾಯ ಸಂಘದ ಸದಸ್ಯೆ ಜಯ್ಯಮ್ಮ ಅವರಿಗೆ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಂಪೂರ್ಣ ಸುರಕ್ಷಾದಿಂದ ಮಂಜೂರಾದ 40 ಸಾವಿರ ರೂಗಳ ಚೆಕ್ ಯೋಜನಾಧಿಕಾರಿ ವಸಂತ್ ದೇವಾಡಿಗ ವಿತರಿಸಿದರು.

## ಸಾಲಕಟ್ಟೆಯಲ್ಲಿ ನಾಡಿದ್ದು ಕಳಾಸರೋಹಣ

ಹರಿಹರ, ನ.12- ತಾಲ್ಲೂಕಿನ ಸಾಲಕಟ್ಟೆ ಗ್ರಾಮದ ಶ್ರೀ ದುರ್ಗಾ ಪರಮೇಶ್ವರಿ ಸೇವಾ ಸಮಿತಿ ವತಿಯಿಂದ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಕಳಸಾರೋಹಣ ಕಾರ್ಯಕ್ರಮವು ಇದೇ ದಿನಾಂಕ 15 ರ ಸೋಮವಾರ ನಡೆಯಲಿದೆ. ಸೋಮವಾರ ಬೆಳಿಗ್ಗೆ ಬ್ರಾಹ್ಮೀ ಮುಹೂರ್ತದಲ್ಲಿ ಗಂಗಾಪೂಜೆ ಹಾಗೂ ಗಣಪತಿ ಪೂಜೆ ನೆರವೇರಿಸಲಾಗುವುದು. ನಂತರ ಬೆಳಗ್ಗೆ 9 ರಿಂದ 10.30 ಕ್ಕೆ ಶ್ರೀಶೈಲ ಪೀಠದ ಜಗದ್ಗುರು ಡಾ. ಚೆನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ ಕಳಸಾರೋಹಣ ನೆರವೇರಿಸಲಿದ್ದಾರೆ ಎಂದು ಗ್ರಾಮದ ಮುಖಂಡರಾದ ಡಿ.ಎಂ. ಹಾಲಸ್ವಾಮಿ ತಿಳಿಸಿದ್ದಾರೆ.

## ರಾಣೇಬೆನ್ನೂರು : ಶನೈಶ್ಚರ ಮಂದಿರದಲ್ಲಿ ಧಾರ್ಮಿಕ ಕಾರ್ಯಕ್ರಮ

ರಾಣೇಬೆನ್ನೂರು ಹೊರ ವಲಯದಲ್ಲಿರುವ ಶ್ರೀ ಶನೈಶ್ಚರ ಮಂದಿರದಲ್ಲಿ ಲೋಕ ಕಲ್ಯಾಣಾರ್ಥ ಮತ್ತು ಪ್ರದೇಶಾಭಿವೃದ್ಧಿಗಾಗಿ ಎರಡು ಮಹಾ ಮಂಡಲಗಳ ಕಾಲ ನಡೆದಿರುವ ವಿವಿಧ ಧಾರ್ಮಿಕ ಕಾರ್ಯಕ್ರಮಗಳ 365ನೇ ದಿನದ ಧಾರ್ಮಿಕ ಕಾರ್ಯಕ್ರಮವು ಇಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ.

ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ದರಾಮ ಮಹಾಸ್ವಾಮಿಗಳ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಶನೈಶ್ಚರ ಮಂದಿರದ ಶ್ರೀ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ನೇತೃತ್ವ ವಹಿಸಲಿದ್ದಾರೆ.

## ಶಂಕರ ವಿಹಾರ ಬಡಾವಣೆಯಲ್ಲಿ ಪುನೀತ್‌ರಾಜ್‌ಕುಮಾರ್ ಪುಣ್ಯಸ್ಮರಣೆ



ದಾವಣಗೆರೆ, ನ.12- ನಗರದ ಶಂಕರ ವಿಹಾರ ಬಡಾವಣೆಯ 'ಬಿ' ಬ್ಲಾಕ್‌ನಲ್ಲಿ ನಟ ಪುನೀತ್ ರಾಜಕುಮಾರ್ ಅವರ ಪುಣ್ಯಸ್ಮರಣೆಯನ್ನು ಬಡಾವಣೆಯ ಹೆಣ್ಣುಮಕ್ಕಳು ಸೇರಿ ಮಾಡಿದ್ದು ವಿಶೇಷ.

## ಕೌಶಲ್ಯ ವೃದ್ಧಿಗಾಗಿ ಎಥ್ನೋಟೆಕ್ ಜೊತೆ ಜೈನ್ ಇನ್‌ಸ್ಟಿಟ್ಯೂಟ್ ಸಹಭಾಗಿತ್ವ




ದಾವಣಗೆರೆ, ನ. 12– ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ವಿದ್ಯಾರ್ಥಿಗಳ ಕೌಶಲ್ಯ ವೃದ್ಧಿಗಾಗಿ ಎಥ್ನೋಟೆಕ್ ಅಕಾಡೆಮಿಕ್ ಸಲ್ಯೂಷನ್ ಜೊತೆ ತಿಳುವಳಿಕೆ ಪತ್ರಕ್ಕೆ ಸಹಿ ಹಾಕಲಾಗಿದೆ. ಎಥ್ನೋಟೆಕ್ ಅಕಾಡೆಮಿಕ್ ಸಲ್ಯೂಷನ್‌ನ ಸದಸ್ಯರೂ ಆಗಿರುವ ಮೈಸೂರಿನ ಜೆ.ಎಸ್.ಎಸ್. ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಮಾಜಿ ಉಪಕುಲಪತಿ ಡಾ. ಬಿ.ಜಿ. ಸಂಗಮೇಶ್ವರ್, ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಾಂಶುಪಾಲ ಡಾ. ಡಿ.ಬಿ. ಗಣೇಶ್ ಅವರು ತಿಳುವಳಿಕೆ ಪತ್ರಕ್ಕೆ ಸಹಿ ಹಾಕಿದ್ದಾರೆ.


ಶ್ರೀ ಕುಮಾರ ವಿಜಯ ನಾಟಕ ಸಂಘ (ರಿ.) ಚಿತ್ತರಗಿ.ಇವರಿಂದ



**ಮಾವ ಪೈಲ್ವಾನ್ ಅಳಿಯ ಹೈವಾನ್**

ಹಾಸ್ಯ ಭರಿತ ಸಾಮಾಜಿಕ ನಾಟಕ

ಕೇವಲ ಎರಡು ದಿನ ಮಾತ್ರ

ದಾವಣಗೆರೆ ಪಿ.ಬಿ. ರಸ್ತೆ, (ಶ್ರೀ ನರಹರಿಶೇಟ್ ಕಲ್ಯಾಣ ಮಂಟಪದ ಎದುರಿಗೆ) ಟಿ.ಎಂ.ಪಿ.ಎನ್. ಕಾಂಪೌಂಡ್‌ನಲ್ಲಿ

ಸಂಚಾಲಕರು : ಮಂಜುನಾಥ್ ಜಾಲ್ಯಾಳ 98803 42862

**ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಟ್ರಸ್ಟ್ ಅಂಡ್ ಹಾಸ್ಪಿಟಲ್**

ಸಕ್ಕರೆ ಕಾಯಿಲೆ ತಪಾಸಣೆ ಹಾಗೂ ಸಂಶೋಧನಾ ಕೇಂದ್ರ

2ನೇ ಮುಖ್ಯರಸ್ತೆ, ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-577002.

37ನೇ ವಿಶ್ವ ಮಧುಮೇಹ ದಿನಾಚರಣೆ -2021

ದಿನಾಂಕ 14.11.2021ರ ಭಾನುವಾರ, ಬೆಳಿಗ್ಗೆ 8 ರಿಂದ ಮಧ್ಯಾಹ್ನ 1 ರವರೆಗೆ

'ಸಕ್ಕರೆ ಕಾಯಿಲೆ ಚಿಕಿತ್ಸೆಗೆ ಮಾರ್ಗದರ್ಶನ'

ಉಚಿತ ರಕ್ತ ಪರೀಕ್ಷೆ ಮತ್ತು ತಪಾಸಣೆ

ಸರ್ವರಿಗೂ ಸ್ವಾಗತ... ಸುಸ್ವಾಗತ...

**LOURDES BOY'S HIGH SCHOOL**

P.J. Extension, Davangere., Contact : 99802 44377

**WANTED TEACHERS**

| Sl.No. Post | Qualification | Subject |
|---|---|---|
| 1) Lower Primary School-01 | P.U.C. DEd., | All Subjects |
| 2) Higher Primary School-01 | B.Sc. or B.A., B.Ed., | All Subjects |
| 3) High School-01 | B.A. or M.A., B.Ed., | (English & Social) |
| 4) High School-01 | B.Sc., or M.Sc., B.Ed. | (Science CBZ) |

Eligible Candidates with Fluency in English and having minimum one year of teaching experience may walk in for the interview on 15.11.2021. Reporting time for the interview is between 10.am to 11.30 am. Candidates should bring application along with Bio-Data/Resume with necessary documents.


## ಸಾರ್ವಜನಿಕ ಪ್ರಕಟಣಾ ನೋಟೀಸ್

ನನ್ನ ಕಕ್ಷಿದಾರರಾದ **ಪಿ.ಎಸ್. ಗುಪ್ತಾ ತಂದೆ ಕೆ.ಎನ್. ಪ್ರಭಾಕರ ಶೆಟ್ಟಿ** ದಾವಣಗೆರೆ ವಾಸಿ ಇವರು ನೀಡಿದ ದಾಖಲೆ ಮತ್ತು ಮಾಹಿತಿ ಆಧಾರದ ಮೇಲೆ ಸಾರ್ವಜನಿಕ ಪ್ರಕಟಣೆ ನೀಡುವುದೇನೆಂದರೆ,

ನನ್ನ ಕಕ್ಷಿದಾರರಿಗೆ ಈ ಕೆಳಗೆ ವಿವರಿಸಿದ ಷೆಡ್ಯೂಲ್‌ನ ಕೃಷಿ ಜಮೀನನ್ನು ದಾವಣಗೆರೆ ಎಸ್.ಎಸ್. ಹೈಟೆಕ್ ಆಸ್ಪತ್ರೆ ರಸ್ತೆ ವಾಸಿ **ಎಸ್. ಸಿದ್ದೇಶ್ ತಂದೆ ಶಿವನಗೌಡ** (ಮೊ: 99807 15236) ಇವರು ತಾ: 09.12.2020ರಂದು ಸಾಕ್ಷಿಗಳ ಸಮಕ್ಷಮ ಸೊತ್ತಿನ ಮಾರುಕಟ್ಟೆ ದರಕ್ಕೆ ಕ್ರಯದ ಕರಾರು ಕೈ ಚೀಟಿ ಪತ್ರದ ಮುಖೇನ ಬರೆದುಕೊಟ್ಟು ಮುಂಗಡ ಹಣ ರೂ. 50,001-00 ಗಳನ್ನು ಪಡೆದುಕೊಂಡಿದ್ದು, ಕರಾರಿನ ಪ್ರಕಾರ ಸದರಿಯವರು ದಾಖಲೆಗಳನ್ನು ಸರಿಪಡಿಸಿ ಷೆಡ್ಯೂಲ್ ಸೊತ್ತನ್ನು ಶುದ್ಧ ಕ್ರಯಪತ್ರ ಬರೆದುಕೊಡಲು ಒಪ್ಪಿ, ಕ್ರಯಪತ್ರ ಬರೆದುಕೊಡಲು ಕೇಳಿಕೊಂಡರೂ ಬರೆದುಕೊಡದೆ ಸತಾಯಿಸುತ್ತಿದ್ದಾರೆ.

ಪ್ರಸ್ತುತ ಸಂದರ್ಭದಲ್ಲಿ ಸದರಿ ಷೆಡ್ಯೂಲ್ ಸೊತ್ತಿನ ಕ್ರಯದ ಕರಾರು ಕೈಚೀಟಿ ಪತ್ರ ನನ್ನ ಕಕ್ಷಿದಾರರ ಹೆಸರಿಗೆ ಇದ್ದಾಗ್ಯೂ ಎಸ್. ಸಿದ್ದೇಶ್ ಇವರು ಬೇರೆಯವರಿಗೆ ಸೊತ್ತನ್ನು ಮಾರಾಟ, ಹಸ್ತಾಂತರ, ಪರಭಾರೆ, ವಗೈರೆ ಮಾಡಲು ಹುನ್ನಾರ ನಡೆಸುತ್ತಿರುವ ವಿಚಾರ ನನ್ನ ಕಕ್ಷಿದಾರರ ಗಮನಕ್ಕೆ ಬಂದ ಕಾರಣ ಈ ಸಾರ್ವಜನಿಕ ನೋಟೀಸ್ ನೀಡಲಾಗಿದೆ. ಸಾರ್ವಜನಿಕರು ಷೆಡ್ಯೂಲ್ ಸೊತ್ತನ್ನು ಮಾರಾಟ, ಹಸ್ತಾಂತರ, ಸಂಬಂಧ ವ್ಯವಹಾರ ಮಾಡಬಾರದಾಗಿ ಈ ಮೂಲಕ ಸಾರ್ವಜನಿಕರಲ್ಲಿ ಪ್ರಕಟಣೆ ನೀಡಲಾಗಿದೆ. ನನ್ನ ಕಕ್ಷಿದಾರರು ಸದರಿ ಕ್ರಯದ ಕರಾರು ಕೈಚೀಟಿ ಪತ್ರದ ಒಪ್ಪಂದ ನೆರವೇರಿಕೆಗೆ ಸೂಕ್ತ ನ್ಯಾಯಾಲಯದಲ್ಲಿ ದಾವೆ ಹೂಡಿ ಷೆಡ್ಯೂಲ್ ಸೊತ್ತನ್ನು ಪಡೆಯುವರಿದ್ದಾರೆ. ಆದ್ದರಿಂದ ಈ ವಿಚಾರಕ್ಕೂ ಮೀರಿ ಯಾವುದೇ ಸಾರ್ವಜನಿಕರು ಸೊತ್ತನ್ನು ಖರೀದಿ, ಮಾರಾಟ, ಹಸ್ತಾಂತರ ವ್ಯವಹಾರ ಮಾಡಿದಲ್ಲಿ ಸದರಿ ವ್ಯವಹಾರಗಳು ನನ್ನ ಕಕ್ಷಿದಾರರಿಗೆ ಗೊತ್ತಿಲ್ಲದ ವಿಚಾರಗಳಾಗಿರುತ್ತವೆ. ಹಾಗೂ ತಾ: 09.12.2020ರ ಕೈಚೀಟಿ ಪತ್ರಕ್ಕೆ ಯಾವುದೇ ಕಾನೂನಿನ ಬಾಧಕ ಇರುವುದಿಲ್ಲ. ಷೆಡ್ಯೂಲ್ ಸೊತ್ತಿನ ಮೇಲೆ ಕಾನೂನು ಬದ್ಧ ಹಕ್ಕನ್ನು ಪ್ರತಿಷ್ಠಾಪಿಸಲು ನನ್ನ ಕಕ್ಷಿದಾರರು ಸದಾ ಹಕ್ಕುಳ್ಳವರಾಗಿರುತ್ತಾರೆ. ಮುಂದೆ ಆಗುವ ಕಾನೂನಿನ ತೊಂದರೆ, ಲುಕ್ಸಾನುಗಳಿಗೆ ಖರೀದಿಸಿದ ವ್ಯಕ್ತಿಗಳೇ ಹೊಣೆಗಾರರಾಗುತ್ತಾರೆ ಎಂದು ಪ್ರಚುರಪಡಿಸಿದ ಸಾರ್ವಜನಿಕ ನೋಟೀಸ್ (ಎಚ್ಚರಿಕೆ) ಇದಾಗಿರುತ್ತದೆ.

**ಷೆಡ್ಯೂಲ್**

(ಪಾಲು ವಿಭಾಗ ಮುಖೇನ ಬಂದಿರುವ ಪತ್ರದಲ್ಲಿ ಇರುವಂತೆ)

ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ಆವರಗೆರೆ ಗ್ರಾಮದ ರಿ.ಸರ್ವೆ ನಂ. 183/1ಪಿ ಪೋಡಾದ ನಂತರ ರಿ.ಸರ್ವೆ ನಂ. 183/10ರ ವಿಸ್ತೀರ್ಣ, ಎಕರೆ -01, ಗುಂಟೆ 23, ಖಾತೆ ನಂ.610 ವುಳ್ಳ ಜಮೀನಿಗೆ ಚಕ್ಕುಬಂದಿ: **ಪೂರ್ವಕ್ಕೆ :** ಗುಡಿಹಿಂದಲ ಹನುಮಜ್ಜಿಯವರ ಹೊಲ, **ಪಶ್ಚಿಮಕ್ಕೆ :** ಎಸ್.ಎಸ್. ಸಂಗಪ್ಪನವರ ಸೊತ್ತು, **ಉತ್ತರಕ್ಕೆ :** ಚಾನಲ್, **ದಕ್ಷಿಣಕ್ಕೆ :** ಗಂಗಪ್ಪನವರ ತೋಟ.

ಕಕ್ಷಿದಾರ ಪರ ವಕೀಲರು
**ಯೋಗೀಶ್ವರಪ್ಪ,** ವಕೀಲರು
#705/2 1ನೇ ಮೇನ್, 10ನೇ ಕ್ರಾಸ್,
ಕೆ.ಬಿ. ಬಡಾವಣೆ, ದಾವಣಗೆರೆ. **ಮೊ: 95384 41489**

**ದಾವಣಗೆರೆ**
**13.11.2021**


**ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್**

ಆಡಳಿತ ಕಛೇರಿ, ನಂ.120, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ–577001

**ಮಾನ್ಯ ಸದಸ್ಯರ ಗಮನಕ್ಕೆ**

ಈ ಮೂಲಕ ತಮಗೆ ತಿಳಿಯಪಡಿಸುವುದೇನೆಂದರೆ, ಕೋವಿಡ್–19 ವೈರಸ್ ಮಹಾಮಾರಿ ಸಾಂಕ್ರಾಮಿಕ ರೋಗದ ಪ್ರಯುಕ್ತ ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಹೆಚ್ಚಿಗೆ ಜನ ಒಂದೇ ಕಡೆ ಗುಂಪಾಗಿ ಸೇರುವಂತಿಲ್ಲದ ಪ್ರಯುಕ್ತ ಬ್ಯಾಂಕಿನ 2021–22ನೇ ಸಾಲಿನ 52ನೇ ವಾರ್ಷಿಕ ಮಹಾಸಭೆಯನ್ನು ಸರ್ವ ಸದಸ್ಯರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ವಿಡಿಯೋ ಕಾನ್ಫರೆನ್ಸ್/ವರ್ಚ್ಯುಯಲ್ ಮೀಟಿಂಗ್ ಮೂಲಕ ನಡೆಸಲು ಸರ್ಕಾರವು ಮಾರ್ಗಸೂಚಿಯನ್ನು ನೀಡಿರುತ್ತದೆ. ಈ ಮಾರ್ಗಸೂಚಿಯನ್ವಯ ಬ್ಯಾಂಕಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 21–11–2021ರ ಭಾನುವಾರ ಮಧ್ಯಾಹ್ನ 12.30 ಗಂಟೆಗೆ ವಿಡಿಯೋ ಕಾನ್ಫರೆನ್ಸ್/ ವರ್ಚ್ಯುಯಲ್ ಮೀಟಿಂಗ್ ಮೂಲಕ ನಡೆಸಲು ಆಡಳಿತ ಮಂಡಲಿ ತೀರ್ಮಾನಿಸಿದೆ. ಆದ್ದರಿಂದ ಮಾನ್ಯ ಸದಸ್ಯರು ವಾರ್ಷಿಕ ಮಹಾಸಭೆಯಲ್ಲಿ ವಿಡಿಯೋ ಕಾನ್ಫರೆನ್ಸ್/ವರ್ಚ್ಯುಯಲ್ ಮೂಲಕ ಪಾಲ್ಗೊಳ್ಳುವುದನ್ನು ಸಾಮಾನ್ಯ ಸಭೆಯ ಹಾಜರಾತಿಯೆಂದು ಪರಿಗಣಿಸುವುದರಿಂದ ಮಾನ್ಯ ಸದಸ್ಯ ಬಾಂಧವರು **ತಮ್ಮ ಮೊಬೈಲ್/ ಸೆಲ್ ಸಂಖ್ಯೆಯನ್ನು ಬ್ಯಾಂಕಿನ ಉಳಿತಾಯ/ ಚಾಲ್ತಿ ಖಾತೆಗಳಲ್ಲಿ / ಷೇರು ಖಾತೆಗಳಲ್ಲಿ** ನೊಂದಾಯಿಸಿಕೊಳ್ಳಲು ವಿನಂತಿ. ಬ್ಯಾಂಕ್ ವಾರ್ಷಿಕ ಮಹಾಸಭೆಯ ಪೂರ್ವದಲ್ಲಿ ಎಸ್.ಎಂ.ಎಸ್. ಮೂಲಕ ನೀಡುವ ಸಾಂಕೇತಿಕ ಸಂಖ್ಯೆಯ ಮೂಲಕ ತಾವುಗಳು ಅಂತರ್ಜಾಲದಲ್ಲಿ ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಳ್ಳಲು ವಿನಂತಿಸಲಾಗಿದೆ. ಮಾನ್ಯ ಸದಸ್ಯರು ತಮ್ಮ ಹಾಜರಾತಿಗಾಗಿ/ಪಾಲ್ಗೊಳ್ಳಲು ಈ ಕೆಳಗೆ ಕೊಟ್ಟಿರುವ ಲಿಂಕ್‌ನ್ನು ಬಳಸಿಕೊಳ್ಳಲು ತಿಳಿಸಿದೆ.

**ಮಹಾಸಭೆಯ ಹಾಜರಾತಿಗಾಗಿ ಲಿಂಕ್ ಹಾಗೂ ಕ್ಯೂ ಆರ್ ಕೋಡ್**

http://forms.gle/jcT61opafwuyjzph6

SCAN for LINK

ಸಹಿ/– **ಡಾ.ಶಾಮನೂರು ಶಿವಶಂಕರಪ್ಪ**
ಅಧ್ಯಕ್ಷರು

ಸಹಿ/– **ಜಿ.ವಿ. ಶಿವಶಂಕರ್**
ಪ್ರಧಾನ ವ್ಯವಸ್ಥಾಪಕರು

ಸಹಿ/– **ಎಸ್.ಎಸ್.ಮಲ್ಲಿಕಾರ್ಜುನ್**
ಉಪಾಧ್ಯಕ್ಷರು

# ಜಗಳೂರಿನಲ್ಲಿ ಇಂದು ಕಮ್ಮವಾರಿ ಕ್ಷೇಮಾಭಿವೃದ್ಧಿ ಸಂಘ ಉದ್ಘಾಟನೆ

ಜಗಳೂರು ತಾಲ್ಲೂಕು ಕಮ್ಮವಾರಿ ಕ್ಷೇಮಾಭಿವೃದ್ಧಿ ಸಂಘದ ಉದ್ಘಾಟನೆ ಹಾಗೂ ಸನ್ಮಾನ ಸಮಾರಂಭವನ್ನು ಇಂದು ಬೆಳಿಗ್ಗೆ 11 ಕ್ಕೆ ಜಗಳೂರಿನ ತರಳಬಾಳು ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಶಾಸಕ ಜಿ.ಹೆಚ್. ತಿಪ್ಪಾರೆಡ್ಡಿ ಉದ್ಘಾಟನೆ ನೆರವೇರಿಸ ಲಿದ್ದು, ಜಿ.ವಿ. ರಂಗನಾಥ ರೆಡ್ಡಿ ಅಧ್ಯಕ್ಷತೆ ವಹಿಸು ವರು. ಡಾ. ಸಂಗೇನಹಳ್ಳಿ ಅಶೋಕ್ ಕುಮಾರ್ ಉಪನ್ಯಾಸ ನೀಡ ಲಿದ್ದಾರೆ. ವಿಶೇಷ ಆಹ್ವಾನಿತರಾಗಿ ತಿಪ್ಪಮ್ಮ, ಅಶ್ವತ್ಥ ರೆಡ್ಡಿ, ಜಿ.ಎ. ಶ್ಯಾಮ್ ಪ್ರಸಾದ್, ಜಿ.ಎ. ರಮೇಶ್ ಬಾಬು, ತಿಪ್ಪೇಸ್ವಾಮಿ ರೆಡ್ಡಿ, ಸಿದ್ಧಿಹಳ್ಳಿ, ಕೆ.ಹೆಚ್. ಮಾಧವರೆಡ್ಡಿ ಆಗಮಿಸಲಿದ್ದು, ಮುಖ್ಯ ಅತಿಥಿಗಳಾಗಿ ಜೆ.ಎಸ್. ವೇಣುಗೋಪಾಲ್ ರೆಡ್ಡಿ, ಸತ್ಯನಾರಾಯಣ, ಬಾಲ್‌ರಾಜ್, ತಿಪ್ಪೇರುದ್ರ ರೆಡ್ಡಿ ಹರಿಹರ, ಡಾ. ಕಂಠೀರವ ಬಾಲ ಸರಸ್ವತಿ, ಕುಬೇರ ರೆಡ್ಡಿ, ಡಿ.ಕೆ. ಶೈಲ, ಜಯಮ್ಮ ನಾಗೇಂದ್ರ ರೆಡ್ಡಿ ಉಪಸ್ಥಿತರಿರುವರು.


## ದಾವಣಗೆರೆ ವಿಶ್ವವಿದ್ಯಾನಿಲಯ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007.**
**ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್: 08192–208008**

**ಸಂಖ್ಯೆ:ದಾವಿವಿ/ಶೈಕ್ಷಣಿಕ/517/2021–22/2545** **ದಿನಾಂಕ:11.11.2021**

### ಪ್ರವೇಶ ಪ್ರಕಟಣೆ

ವಿಷಯ: **ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಮತ್ತು ಡಿಪ್ಲೋಮಾ ಕೋರ್ಸುಗಳಿಗೆ 2021–22ನೇ ಶೈಕ್ಷಣಿಕ ಸಾಲಿಗೆ ಆನ್‌ಲೈನ್ ಕೌನ್ಸಿಲಿಂಗ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.**
ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:11.11.2021.

ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ ಶಿವಗಂಗೋತ್ರಿ, ದಾವಣಗೆರೆ, ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ, ಘಟಕ ಕಾಲೇಜುಗಳು, ಸ್ವಾಯತ್ತ ಕಾಲೇಜುಗಳು ಮತ್ತು ಸಂಲಗ್ನಗೊಂಡ ಕಾಲೇಜುಗಳಲ್ಲಿನ ವಿವಿಧ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಮತ್ತು ಡಿಪ್ಲೋಮಾ ಕೋರ್ಸುಗಳಿಗೆ 2021–22ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗಳಿಗೆ "ಆನ್‌ಲೈನ್" ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

**i. ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ, ಶಿವಗಂಗೋತ್ರಿ, ದಾವಣಗೆರೆ – ಇಲ್ಲಿರುವ ಸ್ನಾತಕೋತ್ತರ ಕೋರ್ಸುಗಳ ವಿವರ:**

| ಕ್ರ.ಸಂ. | ನಿಕಾಯದ ಹೆಸರು | ವ್ಯಾಸಂಗ ವಿಷಯಗಳು |
|---|---|---|
| 1 | ಕಲಾ | ಎಂ.ಎ: ಕನ್ನಡ; ಇಂಗ್ಲೀಷ್; ಅರ್ಥಶಾಸ್ತ್ರ; ಇತಿಹಾಸ; ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ; ಸಮಾಜ ಕಾರ್ಯ(ಎಂ.ಎಸ್.ಡಬ್ಲ್ಯೂ); ರಾಜ್ಯಶಾಸ್ತ್ರ; ಸಮಾಜಶಾಸ್ತ್ರ; ಹಿಂದಿ; ಉರ್ದು; ಅಪರಾಧಶಾಸ್ತ್ರ; ತತ್ವಶಾಸ್ತ್ರ; ಮನಃಶಾಸ್ತ್ರ; ಮ್ಯೂಸಿಕ್ & ಶ್ರವ್ಯಕಲೆ; ಮಾಸ್ಟರ್ ಆಫ್ ವಿಜುವಲ್ ಆರ್ಟ್ಸ್ (ಎಂ.ವಿ.ಎ) ಇನ್ ಅಪ್ಲೈಡ್ ಆರ್ಟ್ & ಪೈಂಟಿಂಗ್. |
| 2 | ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ | ಎಂ.ಕಾಂ.<br>ಎಂ.ಬಿ.ಎ.(ಪ್ರವೇಶಾತಿಯು ಪಿ.ಜಿ.ಸಿ.ಇ.ಟಿ/ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆ ಮೂಲಕ) |
| 3 | ಶಿಕ್ಷಣ | ಎಂ.ಇಡಿ./ಎಂ.ಪಿ.ಇಡಿ./ಬಿ.ಪಿ.ಇಡಿ. |
| 4 | ವಿಜ್ಞಾನ ಮತ್ತು ತಂತ್ರಜ್ಞಾನ | ಎಂ.ಎಸ್ಸಿ: ಜೀವರಸಾಯನಶಾಸ್ತ್ರ; ಜೈವಿಕತಂತ್ರಜ್ಞಾನ; ಸಸ್ಯಶಾಸ್ತ್ರ; ರಸಾಯನಶಾಸ್ತ್ರ; ಗಣಕಯಂತ್ರ ವಿಜ್ಞಾನ; ಪರಿಸರ ವಿಜ್ಞಾನ; ಎಲೆಕ್ಟ್ರಾನಿಕ್ಸ್; ಆಹಾರ ತಂತ್ರಜ್ಞಾನ; ಫ್ಯಾಷನ್ ಡಿಸೈನ್; ಲೈಬ್ರರಿ ಅಂಡ್ ಇನ್ಫಾರ್ಮೇಷನ್ ಸೈನ್ಸ್; ಗಣಿತಶಾಸ್ತ್ರ; ಸೂಕ್ಷ್ಮಾಣುಜೀವಶಾಸ್ತ್ರ; ಭೌತಶಾಸ್ತ್ರ, ಸಂಖ್ಯಾಶಾಸ್ತ್ರ; ಯೋಗ ವಿಜ್ಞಾನ; ಪ್ರಾಣಿಶಾಸ್ತ್ರ. |
| 5 | ಪಿ.ಜಿ. ಡಿಪ್ಲೋಮೊ | (1) ಪಿ.ಜಿ. ಡಿಪ್ಲೋಮಾ ಇನ್ ಫೈನಾನ್ಸಿಯಲ್ ಸರ್ವಿಸ್ – ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ<br>(2) ಪಿ.ಜಿ. ಡಿಪ್ಲೋಮ ಇನ್ ಕಮ್ಯೂನಿಕೇಟಿವ್ ಇಂಗ್ಲೀಷ್ – ಇಂಗ್ಲೀಷ್ ಅಧ್ಯಯನ ವಿಭಾಗ<br>(3) ಪಿ.ಜಿ. ಡಿಪ್ಲೋಮ ಇನ್ ಡೇಟಾ ಎನಾಲ್ಸಿಸ್ – ಅರ್ಥಶಾಸ್ತ್ರ ಅಧ್ಯಯನ ವಿಭಾಗ<br>(4) ಪಿ.ಜಿ. ಡಿಪ್ಲೋಮ ಇನ್ ಯೋಗ ವಿಜ್ಞಾನ – ಯೋಗ ವಿಜ್ಞಾನ ಅಧ್ಯಯನ ವಿಭಾಗ<br>(5) ಪಿ.ಜಿ. ಡಿಪ್ಲೋಮಾ ಇನ್ ಎಂ.ವೋಕ್ ಇನ್ ಸೈಬರ್ ಸೆಕ್ಯೂರಿಟಿ – ಗಣಕ ವಿಜ್ಞಾನ ಅಧ್ಯಯನ ವಿಭಾಗ<br>(6) ಪಿ.ಜಿ. ಡಿಪ್ಲೋಮಾ ಇನ್ ಕ್ಲಿನಿಕಲ್ ಡಯಟಿಕ್ಸ್ & ಅಪ್ಲೈಡ್ ನೂಟ್ರಿಷನ್ – ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ<br>(7) ಪಿ.ಜಿ. ಡಿಪ್ಲೋಮಾ ಇನ್ ಡಿಜಿಟಲ್ ಮೀಡಿಯಾ – ಪತ್ರಿಕೋದ್ಯಮ ಮತ್ತು ಸಮೂಹ ಮಾಧ್ಯಮ ಅಧ್ಯಯನ ವಿಭಾಗ.<br>(8) ಡಿಪ್ಲೋಮಾ ಇನ್ ಡಿಜಿಟಲ್ ಆರ್ಟ್ – ದೃಶ್ಯಕಲಾ ಕಾಲೇಜು, ದಾವಣಗೆರೆ.<br>(9) ಯೋಗ ವಿಜ್ಞಾನದ ಮೂರು ತಿಂಗಳ ಸರ್ಟಿಫಿಕೆಟ್ ಕೋರ್ಸ್ – ಯೋಗ ವಿಜ್ಞಾನ ಅಧ್ಯಯನ ವಿಭಾಗ |

**ii. ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜ್ಞಾನ ಗಂಗೋತ್ರಿ, ಚಿತ್ರದುರ್ಗ–ಇಲ್ಲಿರುವ ಸ್ನಾತಕೋತ್ತರ ವಿಷಯಗಳು:**

| ಕ್ರ.ಸಂ. | ನಿಕಾಯದ ಹೆಸರು | ವ್ಯಾಸಂಗ ವಿಷಯಗಳು |
|---|---|---|
| 1 | ಕಲಾ | ಎಂ.ಎ: ಕನ್ನಡ; ಇಂಗ್ಲೀಷ್; ಅರ್ಥಶಾಸ್ತ್ರ; ಸಮಾಜಕಾರ್ಯ |
| 2 | ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ | ಎಂ.ಕಾಂ. |
| 3 | ವಿಜ್ಞಾನ ಮತ್ತು ತಂತ್ರಜ್ಞಾನ | ಎಂ.ಎಸ್ಸಿ: ಸಸ್ಯಶಾಸ್ತ್ರ; ರಸಾಯನಶಾಸ್ತ್ರ; ಗಣಕಯಂತ್ರ ವಿಜ್ಞಾನ; ಗಣಿತಶಾಸ್ತ್ರ; ಭೌತಶಾಸ್ತ್ರ; ಪ್ರಾಣಿಶಾಸ್ತ್ರ; |

**iii. ಸ್ವಾಯತ್ತ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ನಡೆಸುತ್ತಿರುವ ಸ್ನಾತಕೋತ್ತರ ಕೋರ್ಸ್‌ಗಳ ವಿವರ:**

| ಕ್ರ.ಸಂ. | ಕಾಲೇಜಿನ ಹೆಸರು | ವ್ಯಾಸಂಗ ವಿಷಯಗಳು |
|---|---|---|
| | **ದಾವಣಗೆರೆ ಜಿಲ್ಲೆ** | |
| 1 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ. | ಎಂ.ಎ: ಕನ್ನಡ, ಇಂಗ್ಲೀಷ್.<br>ಎಂ.ಕಾಂ.<br>ಎಂ.ಬಿ.ಎ. (ಪಿ.ಜಿ.ಸಿಇಟಿ/ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆ ಮೂಲಕ ಪ್ರವೇಶ) |
| 2 | ಶ್ರೀ ಶ್ರೀ ಶಿವಲಿಂಗೇಶ್ವರಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿ. | ಎಂ.ಎ: ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ.<br>ಎಂ.ಕಾಂ. |
| 3 | ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ. | ಎಂ.ಕಾಂ. |
| 4 | ಎ.ಆರ್.ಜಿ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ | ಎಂ.ಕಾಂ. |
| 5 | ಎಸ್.ಬಿ.ಸಿ. ಮಹಿಳಾ ಪ್ರಥಮ ದರ್ಜೆ ಕಾಲೇಜು, ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರ, ದಾವಣಗೆರೆ | ಎಂ.ಎ: ಇಂಗ್ಲೀಷ್; ಅರ್ಥಶಾಸ್ತ್ರ<br>ಎಂ.ಕಾಂ. |
| 6 | ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್, ದಾವಣಗೆರೆ | ಎಂ.ಬಿ.ಎ. (ಪಿ.ಜಿ.ಸಿ.ಟಿ/ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅಥವಾ ವಿಶ್ವವಿದ್ಯಾನಿಲಯದ ಪ್ರವೇಶ ಪರೀಕ್ಷೆ ಮೂಲಕ ಪ್ರವೇಶ) |
| 7 | ಭದ್ರಾ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ & ಇನ್‌ಫಾರ್ಮೇಷನ್ ಸ್ಟಡೀಸ್, ದಾವಣಗೆರೆ. | ಎಂ.ಕಾಂ. |
| 8 | ಎಸ್.ಜೆ.ವಿ.ಪಿ. ಕಾಲೇಜು, ಹರಿಹರ. | ಎಂ.ಎ. ಕನ್ನಡ; ಎಂ.ಕಾಂ. |
| | **ಚಿತ್ರದುರ್ಗ ಜಿಲ್ಲೆ** | |
| 9 | ಸರ್ಕಾರಿ ಕಲಾ ಕಾಲೇಜು, (ಸ್ವಾಯತ್ತ) ಚಿತ್ರದುರ್ಗ. | ಎಂ.ಎ: ಕನ್ನಡ, ಇಂಗ್ಲೀಷ್. ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ. ಸಮಾಜಶಾಸ್ತ್ರ<br>ಎಂ.ಕಾಂ. |
| 10 | ಸರ್ಕಾರಿ ವಿಜ್ಞಾನ ಕಾಲೇಜು, ಚಿತ್ರದುರ್ಗ. | ಎಂ.ಎಸ್ಸಿ: ಸಸ್ಯಶಾಸ್ತ್ರ; ರಸಾಯನಶಾಸ್ತ್ರ; ಗಣಿತಶಾಸ್ತ್ರ ; ಭೌತಶಾಸ್ತ್ರ; |
| 11 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ. | ಎಂ.ಎ: ಕನ್ನಡ; ಇತಿಹಾಸ<br>ಎಂ.ಕಾಂ |
| 12 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ. | ಎಂ.ಎ: ಕನ್ನಡ; ಸಮಾಜಶಾಸ್ತ್ರ<br>ಎಂ.ಕಾಂ. |
| 13 | ಶ್ರೀಮತಿ ಯಶೋಧರಮ್ಮ ಬೋರಪ್ಪ ಮಹಿಳಾ ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ | ಎಂ.ಎ: ಇಂಗ್ಲೀಷ್ |

| ಕ್ರ.ಸಂ. | ಶುಲ್ಕ ವಿವರಗಳು | ಸಾಮಾನ್ಯ/ಇತರೇ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ | ಪ.ಜಾ/ಪ.ಪಂ/ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ | ಪಾವತಿಸುವ ವಿಧಾನ |
|---|---|---|---|---|
| 1 | ಅರ್ಜಿಗಳ ಪರಿಶೀಲನೆ ಮತ್ತು ಪ್ರವೇಶ ಪರೀಕ್ಷಾ ಶುಲ್ಕ | ರೂ.965/– | ರೂ.490/– | ಶುಲ್ಕಗಳನ್ನು ಆನ್‌ಲೈನ್ ಮೂಲಕ ಸಂಬಂಧಪಟ್ಟ ಖಾತೆಗೆ ಪಾವತಿಸುವುದು |
| 2 | ಹೆಚ್ಚುವರಿ ಕೋರ್ಸುಗಳಿಗೆ ಪ್ರವೇಶ ಪರೀಕ್ಷಾ ಶುಲ್ಕ | ರೂ.880/– | ರೂ.440/– | |

ಅರ್ಜಿಗಳನ್ನು ಸಲ್ಲಿಸುವ ಬಗ್ಗೆ ಅರ್ಹ ಅಭ್ಯರ್ಥಿಗಳು **"ಆನ್‌ಲೈನ್"** ಮೂಲಕ ಅರ್ಜಿಗಳನ್ನು **ದಿನಾಂಕ: 15.11.2021**ರಿಂದ **ದಿನಾಂಕ: 01.12.2021**ರವರೆಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್ ಮೂಲಕ ಸಲ್ಲಿಸಬಹುದು. ವೆಬ್‌ಸೈಟ್ ವಿಳಾಸ: **www.davangereuniversity.ac.in**

**ಮುಖ್ಯ ಸೂಚನೆ:** ಸ್ನಾತಕೋತ್ತರ ಪದವಿ ಮತ್ತು ಡಿಪ್ಲೋಮಾ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತಹ ಮಾಹಿತಿಯನ್ನು ವಿಶ್ವವಿದ್ಯಾನಿಲಯವು ಆಗಾಗ್ಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುತ್ತದೆ. ಅಭ್ಯರ್ಥಿಗಳಿಗೆ ಪ್ರವೇಶಾತಿ ಕುರಿತು ಪ್ರತ್ಯೇಕವಾಗಿ ಯಾವುದೇ ಮಾಹಿತಿಯನ್ನು ರವಾನಿಸಲಾಗುವುದಿಲ್ಲ. ಆದುದರಿಂದ ಪ್ರವೇಶಾತಿ ಬಯಸುವ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನ್ನು ಆಗಾಗ್ಗೆ ನಿಯಮಿತವಾಗಿ ಸಂಪರ್ಕಿಸಿ, ದೈನಂದಿನ ಅಥವಾ ಹೆಚ್ಚುವರಿ ಮಾಹಿತಿಗಳನ್ನು ಪಡೆಯಬಹುದಾಗಿದೆ.

**iV. ಅರ್ಜಿಗಳೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ಪ್ರತಿಗಳ ವಿವರಗಳು:**

1. ಎಸ್.ಎಸ್.ಎಲ್.ಸಿ/10ನೇ ತರಗತಿಯ ಅಂಕಪಟ್ಟಿ ಪ್ರತಿ.
2. ಪದವಿ ಅಂಕಪಟ್ಟಿಗಳು (ಎಲ್ಲಾ ವರ್ಷಗಳ ಮತ್ತು ಎಲ್ಲಾ ಸೆಮಿಸ್ಟರ್‌ಗಳ ಪ್ರತಿಗಳು)
3. ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಪ್ರತಿ.
4. ಆಧಾರ್ ಕಾರ್ಡ್ ಪ್ರತಿ.
5. ಮೀಸಲಾತಿ/ವಿಕಲಾಂಗ/ಕ್ರೀಡಾ/ರಾ.ಸೆ.ಯೋ./ಎನ್.ಸಿ.ಸಿ./ರೇಂಜರ್ಸ್ ಮತ್ತು ರೋವರ್ಸ್/ಮಾಜಿ ಸೈನಿಕರ ಅವಲಂಬಿತರು, ಹೆಚ್.ಕೆ–371(ಜೆ)/ಕನ್ನಡ ಮಾಧ್ಯಮ ಬಗ್ಗೆ–ಸಂಬಂಧಪಟ್ಟ ಅಧಿಕೃತ ಅಧಿಕಾರಿಗಳಿಂದ ನೀಡಲ್ಪಟ್ಟ ದಾಖಲೆಗಳ ಪ್ರತಿ.

**V. ಸ್ನಾತಕೊತ್ತರ/ಡಿಪ್ಲೋಮಾ ಪ್ರವೇಶಾತಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳಿಗೆ ಸಾಮಾನ್ಯ ಮಾರ್ಗಸೂಚಿಗಳು:**

1 ಅರ್ಹ ಅಭ್ಯರ್ಥಿಗಳು ವಿವಿಧ ಸ್ನಾತಕೋತ್ತರ/ಡಿಪ್ಲೋಮಾ ಪದವಿ ಕೋರ್ಸುಗಳ ಪ್ರವೇಶಾತಿಗೆ ಅರ್ಜಿಗಳನ್ನು ಕಂಡಿಕೆ (IV) ರಲ್ಲಿ ತಿಳಿಸಿರುವ ಅಧಿಕೃತ ದಾಖಲಾತಿಗಳ ಪ್ರತಿಗಳೊಂದಿಗೆ ದಿನಾಂಕ: 15.11.2021 ರಿಂದ 01.12.2021 ರೊಳಗೆ ಆನ್‌ಲೈನ್ ಮೂಲಕ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ www.davangereuniversity.ac.in ಸಲ್ಲಿಸಬಹುದಾಗಿದೆ.

2 ಅರ್ಹ ಅಭ್ಯರ್ಥಿಗಳು ಪ್ರವೇಶಾತಿ ಬಯಸುವ ಸ್ನಾತಕೋತ್ತರ ಕೋರ್ಸುಗಳಿಗೆ ಸಂಬಂಧಿಸಿದಂತೆ ಒಂದೇ ಅರ್ಜಿಯನ್ನು ಸಲ್ಲಿಸತಕ್ಕದ್ದು. ಆದಾಗ್ಯೂ, ಪ್ರತಿ ಕೋರ್ಸಿಗೂ ಪ್ರತ್ಯೇಕ ಅರ್ಜಿ ಶುಲ್ಕ ಹಾಗೂ ಪ್ರವೇಶ ಪರೀಕ್ಷಾ ಶುಲ್ಕಗಳನ್ನು ಪಾವತಿಸತಕ್ಕದ್ದು.

3 ಪ್ರವೇಶಾತಿಗೆ ಸಂಬಂಧಿಸಿದ ವಿಭಾಗವಾರು ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದರಿಂದ – ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಮಾಹಿತಿಯನ್ನು ಪಡೆಯತಕ್ಕದ್ದು. ಯಾವುದೇ ಸಂದರ್ಭಗಳಲ್ಲಿ ಪ್ರತ್ಯೇಕವಾಗಿ ಮಾಹಿತಿ ನೀಡಲಾಗುವುದಿಲ್ಲ. ಆದುದರಿಂದ ಅರ್ಜಿದಾರರು ಮಾಹಿತಿಗಾಗಿ ಆಗಾಗ್ಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನ್ನು ಸಂಪರ್ಕಿಸುವುದು (ವೆಬ್‌ಸೈಟ್: www.davangereuniversity.ac.in)

**ಪ್ರವೇಶ ಪರೀಕ್ಷೆಯ ವೇಳಾಪಟ್ಟಿ ಹಾಗೂ ಸಂದರ್ಶನ ಹಾಗೂ ವಿವರಗಳು:**

| ಕ್ರ.ಸಂ. | ವಿವರಗಳು | ದಿನಾಂಕ |
|---|---|---|
| 1 | ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 01.12.2021 |
| 2 | ಪ್ರವೇಶ ಪರೀಕ್ಷೆಗಳ ವೇಳಾಪಟ್ಟಿ: (ಪ್ರತಿಯೊಂದು ವಿಭಾಗಗಳ ಪ್ರವೇಶ ಪರೀಕ್ಷೆಗಳ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು) | 04.12.2021<br>05.12.2021<br>06.12.2021 |
| 3 | ಮೆರಿಟ್ ಸೀಟ್‌ಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಪ್ರಕಟಣೆ | 08.12.2021 |
| | **ಕೇಂದ್ರೀಕೃತ ಸಂದರ್ಶನ ಹಾಗೂ ಎಲ್ಲಾ ಸ್ನಾತಕೋತ್ತರ ಪದವಿ ಪ್ರವೇಶಾತಿಗಳು:** | |
| 4 | ಮೆರಿಟ್ ಮತ್ತು ಸ್ಪೆಷಲ್ ಕ್ಯಾಟಗರಿ | 09.12.2021 |
| 5 | ಓಪನ್ ಮೆರಿಟ್ ಕ್ಯಾಟಗರಿ | 10.12.2021 |
| 6 | ತರಗತಿಗಳ ಪ್ರಾರಂಭ | 13.12.2021 |

4 ಅಭ್ಯರ್ಥಿಗಳು ಅರ್ಜಿಗಳೊಂದಿಗೆ ಅಧಿಕೃತ ದಾಖಲೆಗಳ ಪ್ರತಿಗಳನ್ನು ಒದಗಿಸದಿದ್ದಲ್ಲಿ, ನಿಗದಿತ ಶುಲ್ಕವನ್ನು ಸೂಕ್ತ ಸಮಯದಲ್ಲಿ ಪಾವತಿ ಮಾಡದಿದ್ದಲ್ಲಿ ಅಥವಾ ಪ್ರವೇಶಾತಿ ಪ್ರಕ್ರಿಯೆಗಳಿಂದ ವಿದ್ಯಾರ್ಥಿಗಳು ನಿಗದಿತ ದಿನಾಂಕ ಮತ್ತು ಸಮಯದೊಳಗೆ ಸಂಬಂಧಪಟ್ಟ ವಿಭಾಗದಲ್ಲಿ ಹಾಜರಾಗದಿದ್ದಲ್ಲಿ, ವಿದ್ಯಾರ್ಥಿಗಳ ಪ್ರವೇಶಾತಿಯು ಸ್ವಯಂ ಚಾಲಿತವಾಗಿ (automatically) ರದ್ದಾಗುತ್ತದೆ.

5 ಪ್ರವೇಶಾತಿ ಸಂದರ್ಭದಲ್ಲಿ ಅಭ್ಯರ್ಥಿಗಳು ಸಲ್ಲಿಸುವ ಅಧಿಕೃತ ಮೂಲ ದಾಖಲಾತಿಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ನಕಲಿ/ಕೊಟ್ಟಿ ಅಥವಾ ಅನಧಿಕೃತ ದಾಖಲಾತಿಗಳೆಂದು ಕಂಡುಬಂದಲ್ಲಿ ಯಾವುದೇ ಸಮಯದಲ್ಲಿ ಪ್ರವೇಶಾತಿಗಳನ್ನು ರದ್ದುಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಗಳ ವಿರುದ್ಧ ಕ್ರಮಕೈಗೊಳ್ಳಲಾಗುವುದು.

6 ಪ್ರವೇಶಾತಿ ಪಡೆದಿರುವ ಅಭ್ಯರ್ಥಿಗಳನ್ನು ವಿಶ್ವವಿದ್ಯಾನಿಲಯದ ಮುಖ್ಯಕೇಂದ್ರದಿಂದ – ಸ್ನಾತಕೋತ್ತರ ಕೇಂದ್ರ ಅಥವಾ ಸ್ವಾಯತ್ತ ಕಾಲೇಜು ಅಥವಾ ಸಂಲಗ್ನ ಕಾಲೇಜುಗಳಿಗೆ ವರ್ಗಾಯಿಸುವ ಅಧಿಕಾರವನ್ನು ಹೊಂದಿರುತ್ತದೆ. ಅಲ್ಲದೆ, ಯಾವುದೇ ಕೇಂದ್ರದಲ್ಲಿ ಯಾವುದೇ ವಿಷಯದಲ್ಲಿ ಪ್ರವೇಶಾತಿ ಪ್ರಮಾಣ ಕನಿಷ್ಠ 15 ಕ್ಕಿಂತ ಕಡಿಮೆ ಇದ್ದಲ್ಲಿಯೂ – ಕನಿಷ್ಠ ಪ್ರವೇಶಾತಿಯನ್ನು ಸರಿದೂಗಿಸುವ ಸಲುವಾಗಿ ವರ್ಗಾವಣೆ ಮಾಡಲಾಗುವುದು.

7 ಪ್ರವೇಶಾತಿ ಪ್ರಕ್ರಿಯೆ ಮುಗಿದ ನಂತರ ವಿದ್ಯಾರ್ಥಿಗಳಿಂದ ಭರಿಸಲಾದ ಯಾವುದೇ (ಅರ್ಜಿ ಶುಲ್ಕ, ಪ್ರವೇಶ ಪರೀಕ್ಷಾ ಶುಲ್ಕ, ನೋಂದಣಿ ಶುಲ್ಕ ಅಥವಾ ಇನ್ನಾವುದೇ ಶುಲ್ಕ) ಶುಲ್ಕಗಳನ್ನು ಮರಿಭರಿಕೆ ಮಾಡಲಾಗುವುದಿಲ್ಲ.

8 ಪ್ರವೇಶಾತಿ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ತರಗತಿಗಳು ಪ್ರಾರಂಭವಾಗಲಿದ್ದು, ಪ್ರವೇಶಾತಿ ಪಡೆದ ಅಭ್ಯರ್ಥಿಗಳು ಶೇ.75 ರಷ್ಟು ಹಾಜರಾತಿಯನ್ನು ಪಡೆಯುವುದು ಕಡ್ಡಾಯವಾಗಿದೆ.

9 ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಅಥವಾ ಅವರ ಪೋಷಕರು–ವಿಶ್ವವಿದ್ಯಾನಿಲಯದ ಕಾರ್ಯಾವಧಿಯಲ್ಲಿ ಪೂರ್ವಾಹ್ನ 10:30 ರಿಂದ ಸಂಜೆ 5:30ರವರೆಗೆ ಈ ಕೆಳಕಂಡ ಸಹಾಯ ಕೇಂದ್ರವನ್ನು ದೂರವಾಣಿ ಮೂಲಕ ಸಂಪರ್ಕಿಸಬಹುದಾಗಿದೆ. ಸಹಾಯ ಕೇಂದ್ರದ ದೂರವಾಣಿ ಸಂಖ್ಯೆಗಳು:
6363341215,
6363337901,
6363351762.
ಅಲ್ಲದೆ, ಅಭ್ಯರ್ಥಿಗಳು ಸಂಬಂಧಪಟ್ಟ ವಿಭಾಗಾಧ್ಯಕ್ಷರು ಅಥವಾ ಸಂಯೋಜನಾಧಿಕಾರಿಗಳನ್ನು ವಿಭಾಗಗಳ ಕಾರ್ಯಾವಧಿಯಲ್ಲಿ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

**ಸಹಿ/– ಕುಲಸಚಿವರು,**
**ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.**




# ವಿವಿಧೆಡೆಯಲ್ಲಿ ನಟ ಪುನೀತ್ ರಾಜ್‌ಕುಮಾರ್‌ಗೆ ಶ್ರದ್ಧಾಂಜಲಿ

## ಮಾರ್ಕಂಡೇಶ್ವರ ಭವನ



ನಗರದ 10ನೇ ವಾರ್ಡಿನ ಎಸ್‌ಕೆಪಿ ರಸ್ತೆಯ ಮಾರ್ಕಂಡೇಶ್ವರ ಸಮುದಾಯ ಭವನದ ಮುಂಭಾಗದಲ್ಲಿ ಪುನೀತ್ ರಾಜ್‌ಕುಮಾರ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ನಗರಸಭೆ ಮಾಜಿ ಸದಸ್ಯ ಬಾಬುರಾವ್ ಸಾಳಂಕಿ, ಗೆಳೆಯರಾದ ಕೆ.ಬಿ. ಮಹಾಂತೇಶ್, ಡಿ. ಹಾಲಪ್ಪ, ಪಿ.ಜೆ. ನಾಗರಾಜ್, ಪ್ರಭಾಕರ್ ಸಾಳಂಕಿ, ಗಣೇಶ್, ಪ್ರಭು, ಸಾಂಬೋಜಿ ರಾವ್, ಯೂಸೂಫ್, ಮಲ್ಲಪ್ಪ ಪೂಜಾರ, ರಾಮಣ್ಣ, ಪಂಚಾಕ್ಷರಿ, ಪವನಕುಮಾರ ಹೋಟೆಲ್, ರಘು, ಪ್ರಸಾದ್ ಇವರುಗಳು ಮತ್ತು ಷಣ್ಮುಖಾಚಾರ್, ದಿಳ್ಯಪ್ಪ, ಮಂಜುನಾಥ್ ಸಾಳಂಕಿ ಅವರು ಶ್ರದ್ಧಾಂಜಲಿ ಸಲ್ಲಿಸಿದರು.

## ಜಿಲ್ಲಾ ಆರ್ಯ ಈಡಿಗರ ಸಂಘ



ಜಿಲ್ಲಾ ಆರ್ಯ ಈಡಿಗರ ಸಂಘದಿಂದ ಈಡಿಗರ ಸಮಾಜದ ಯುವ ಮುಖಂಡರೂ, ಪ್ರತಿಭಾನ್ವಿತ ಚಲನಚಿತ್ರ ನಟರೂ ಆದ ಪುನೀತ್ ರಾಜ್ ಕುಮಾರ್ ನಿಧನಕ್ಕೆ ಸಂತಾಪ ವ್ಯಕ್ತಪಡಿಸಲಾಯಿತು. ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಸಮಾಜದ ಅಧ್ಯಕ್ಷ ಹೆಚ್. ಶಂಕರ್, ಪುನೀತ್ ನಿಧನದಿಂದ ನಮ್ಮ ಸಮಾಜಕ್ಕೆ ತುಂಬಲಾರದ ನಷ್ಟ ಆಗಿದೆ ಎಂದು ಕಂಬನಿ ಮಿಡಿದರು. ಈ ಸಂದರ್ಭದಲ್ಲಿ ಕಾರ್ಯದರ್ಶಿ ಎ. ನಾಗರಾಜ್, ಉಪಾಧ್ಯಕ್ಷ ಸಿ. ರವೀಂದ್ರಬಾಬು, ಖಜಾಂಚಿ ಬಿ. ದೇವೇಂದ್ರಪ್ಪ, ಜಂಟಿ ಕಾರ್ಯದರ್ಶಿ ಭರಮಪ್ಪ, ನಿರ್ದೇಶಕರುಗಳಾದ ಬಿ. ಸೋಮಶೇಖರ್, ಗೋವಿಂದರಾಜು, ಮಹಾಬಲೇಶ್, ಈ. ರಾಜಣ್ಣ ಮತ್ತಿತರರು ಹಾಜರಿದ್ದರು.



## ಜೆಜೆಎಂಸಿ, ಬಿಸಿಎ ವಿದ್ಯಾರ್ಥಿಗಳು

ನಗರದ ಜೆಜೆಎಂಸಿ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಬಾಪೂಜಿ ಬಿಸಿಎ ವಿದ್ಯಾರ್ಥಿಗಳು ಒಟ್ಟಿಗೆ ಸೇರಿ ಕನ್ನಡ ಖ್ಯಾತ ನಟ ಪುನೀತ್ ರಾಜ್‌ಕುಮಾರ್‌ರವರಿಗೆ ಶ್ರದ್ಧಾಂಜಲಿ ಸಭೆಯನ್ನು ಜೆಜೆಎಂಸಿ ವಿದ್ಯಾರ್ಥಿನಿಲಯದಲ್ಲಿ ಹಮ್ಮಿಕೊಂಡಿದ್ದರು.

ಕನ್ನಡ ನಾಡು ಕಂಡ ಅಪ್ರತಿಮ ಪ್ರತಿಭಾನ್ವಿತ ನಾಯಕ ನಟರಾಗಿದ್ದ ಪುನೀತ್ ರಾಜ್‌ಕುಮಾರ್ ನಟನೆಯ ಜೊತೆಗೆ ಸಾಮಾಜಿಕ ಕಳಕಳಿಯ ಕೆಲಸಗಳನ್ನು ಮಾಡಿದ್ದರು. ಅವರ ನಿಧನದಿಂದ ಕನ್ನಡ ನಾಡಿಗೆ ತುಂಬಲಾರದ ನಷ್ಟವಾಗಿದೆ ಎಂದು ವಿದ್ಯಾರ್ಥಿಗಳು ಅಭಿಪ್ರಾಯಪಟ್ಟರು. ಶ್ರದ್ಧಾಂಜಲಿ ಸಭೆಯಲ್ಲಿ ವಿದ್ಯಾರ್ಥಿ ಮುಖಂಡರಾದ ನಿತಿನ್ ಶಾಮನೂರು, ಬಿ. ಮಂಜುನಾಥ್, ವಿಕಾಸ್ ಸಾರಥಿ, ಸಂಪತ್, ನಿಹಿಲ್ ವೈ. ಸೇರಿದಂತೆ ಅನೇಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಕಲಾಕುಂಚ



ಕನ್ನಡ ಚಲನಚಿತ್ರ ಇತಿಹಾಸದಲ್ಲಿ ಕೇವಲ ಚಿತ್ರ ನಟನೆಗೆ ಅಷ್ಟೇ ಸೀಮಿತವಾಗದೆ, ಸಾಮಾಜಿಕ ಕಾಳಜಿಯ, ಮಾನವೀಯ ಮೌಲ್ಯದೊಂದಿಗೆ ವೃದ್ಧಾಶ್ರಮ, ಅನಾಥಾಶ್ರಮ, ಉಚಿತ ಶಿಕ್ಷಣ ಸಂಸ್ಥೆ, ಗೋಶಾಲೆ, ಶಿಕ್ಷಣ ಶಕ್ತಿಧಾಮ ಸೇರಿದಂತೆ, ಸಮಾಜಮುಖಿ ಸೇವಾ ಮನೋಭಾವನೆಯ ಅಪರೂಪದ ವ್ಯಕ್ತಿತ್ವದ ಯುವರತ್ನ ನಟ ಪುನೀತ್ ರಾಜಕುಮಾರ್ ನಿಧನಕ್ಕೆ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯ ಸಭಾಂಗಣದಲ್ಲಿ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಅಧ್ಯಕ್ಷತೆಯಲ್ಲಿ ಈ ಸಭೆ ನಡೆಯಿತು.

ಸಭೆಯಲ್ಲಿ ಸಂಸ್ಥೆಯ ಪದಾಧಿಕಾರಿಗಳಾದ ಕೆ.ಹೆಚ್.ಮಂಜುನಾಥ್, ಶ್ರೀಮತಿ ಹೇಮಾ ಶಾಂತಪ್ಪ ಪೂಜಾರಿ, ಜಿ.ಬಿ. ಲೋಕೇಶ್, ಶ್ರೀಮತಿ ಶೈಲಾ ವಿಜಯಕುಮಾರ್ ಶೆಟ್ಟಿ, ಶ್ರೀಮತಿ ವಸಂತಿ ಮಂಜುನಾಥ್, ಕುಸುಮಾ ಲೋಕೇಶ್, ಪುಷ್ಪ ಮಂಜುನಾಥ್, ಶ್ರೀಮತಿ ಶೈಲಾ ವಿನೋದ್, ದೇವರಾಜ್, ಮೀನಾಕ್ಷಿ ವೆಂಕಟೇಶ್, ದೀಪ ಕಿರಣ್, ಸಾವಿತ್ರಿ ಜಗದೀಶ್, ಮಂಜುಳಾ ಸುನೀಲ್, ಬಿ.ಶಾಂತಪ್ಪ ಪೂಜಾರಿ, ಸುಮಾ ಏಕಾಂತಪ್ಪ, ಲತಾ ಪರಮೇಶ್ವರ, ರೇಣುಕಾ ರಾಮಣ್ಣ, ರೇಣುಕಾ ಮಲ್ಲಪ್ಪ, ರಾಧ ಕೃಷ್ಣಮೂರ್ತಿ, ಉಮಾ ಮಹೇಶ್ವರಿ, ಶ್ರೀಮತಿ ಅಡಿಗ, ಶ್ರೀ ಲಕ್ಷ್ಮಿ ಆಂಜನೇಯ, ಪ್ರಭಾ ರವೀಂದ್ರ, ಸುರೇಖ ಕುಬೇರಗೌಡ, ಸುನಂದಾದೇವಿ ಜಂಬನಗೌಡ, ಮಾಲಾ ಶಿವಣ್ಣ, ಜಯಲಕ್ಷ್ಮಿ, ವಿಜಯಕುಮಾರ್‌ಶೆಟ್ಟಿ, ಶ್ರೀಮತಿ ಜ್ಯೋತಿ ಗಣೇಶ್ ಶೆಣೈ ಮುಂತಾದವರು ಉಪಸ್ಥಿತರಿದ್ದರು.



## ಮಲೇಬೆನ್ನೂರು

ವಾಸನ ಗ್ರಾಮದ ಎ ಕೆ ಕಾಲೋನಿಯಲ್ಲಿ ನಟ ಪುನೀತ್ ರಾಜಕುಮಾರ್ ಅವರ ಭಾವ ಚಿತ್ರದ ಎದುರು ಪುನೀತ್ ಅಭಿಮಾನಿ ಬಳಗದವರು ಭಜನೆ ಮಾಡುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು.



**ಅನ್ನ ಸಂತರ್ಪಣೆ :** ಶಿವಪ್ರಸಾದ್ ಕುರುಡಿಮಠ ಗೆಳೆಯರ ಬಳಗದ ವತಿಯಿಂದ ಪವರ್‌ಸ್ಟಾರ್ ಪುನೀತ್‌ರಾಜ್‌ಕುಮಾರ್ ಮತ್ತು ಶಿವಪ್ರಸಾದ್ ಕುರುಡಿಮಠ ಅವರ ಸ್ಮರಣಾರ್ಥ ಬಾತಿಯ ವೃದ್ಧಾಶ್ರಮದಲ್ಲಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.



## ರೇಣುಕಾ ಯಲ್ಲಮ್ಮ ಭಜನಾ ಕಲಾ ಸಂಘ

ನಗರದ ಭಗತ್ ಸಿಂಗ್ ನಗರ, ಡಾಂಗೆ ಪಾರ್ಕ್, ನಿಟುವಳ್ಳಿ, ಶ್ರೀ ರೇಣುಕಾ ಯಲ್ಲಮ್ಮ ಭಜನಾ ಕಲಾ ಸಂಘದಿಂದ ಪುನೀತ್ ರಾಜ್ ಕುಮಾರ್ ಶ್ರದ್ಧಾಂಜಲಿ ಕಾರ್ಯಕ್ರಮ ಏರ್ಪ ಡಿಸಲಾಗಿತ್ತು. ಕಲಾವಿದ ರಾದ ಬಸವನಗೌಡ ಪಾಟೀಲ್, ಮಾರ್ತಾಂಡಪ್ಪ, ಮಂಜಣ್ಣ, ಅಂಜಿನಪ್ಪ, ಶಿವಾಜಿರಾವ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



## ಅಡಿಕೆ ವರ್ತಕರು

ನಗರದ ಅಡಿಕೆ ಮಾರುಕಟ್ಟೆಯ ರಾಮಗೊಂಡನಹಳ್ಳಿ ಜಯಣ್ಣನವರ ಮಂಡಿಯಲ್ಲಿ ಅಡಿಕೆ ವರ್ತಕರಿಂದ ಪುನೀತ್ ರಾಜಕುಮಾರ್ ಅವರ ಶ್ರದ್ಧಾಂಜಲಿ ಸಭೆ ನಡೆಯಿತು.

ಸಭೆಯಲ್ಲಿ ಪುನೀತ್ ರಾಜಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು. ನಂತರ ಮಾತನಾಡಿದ ರಾಮಗೊಂಡನಹಳ್ಳಿ ಬಸವರಾಜಪ್ಪ, ಪುನೀತ್ ಅಕಾಲಿಕ ನಿಧನ ಚಿತ್ರರಂಗಕ್ಕೆ ಮಾತ್ರವಲ್ಲದೇ ನಾಡಿನ ಜನತೆಗೂ ಸಹ ಅಪಾರ ದುಃಖ ತಂದಿದೆ. ಎಲೆಮರೆ ಕಾಯಿಯಂತೆ ಅನಾಥಾಶ್ರಮ, ವೃದ್ಧಾ ಶ್ರಮಗಳು, ಗೋಶಾಲೆ, ಹೆಣ್ಣು ಮಕ್ಕಳ ಶಿಕ್ಷಣ ಸೇರಿದಂತೆ ಅನೇಕ ರೀತಿಯ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರು ಎಂದು ಸ್ಮರಿಸಿದರು.

ಈ ಸಂದರ್ಭದಲ್ಲಿ ಅಡಿಕೆ ದಲಾಲರು, ಖರೀದಿದಾರರು, ಶ್ರಮಿಕ ವರ್ಗದವರು, ರೈತ ಬಾಂಧವರು ಉಪಸ್ಥಿತರಿದ್ದರು. ರಾಮಗೊಂಡನಹಳ್ಳಿ ಜಯಣ್ಣನವರು ಸ್ವಾಗತಿಸಿ, ಬೇತೂರು ಎಂ. ಷಡಾಕ್ಷರಪ್ಪ ವಂದಿಸಿದರು.



## ಎಂಸಿಸಿ ಬಿ ಬ್ಲಾಕ್

ನಟ ಪುನೀತ್ ರಾಜ್ ಕುಮಾರ್ ಅವರ ನಿಧನಕ್ಕೆ ಎಂಸಿಸಿ ಬಿ ಬ್ಲಾಕ್ ನಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಮಹಾನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಮಾತನಾಡಿ, ಪುನೀತ್ ಚಿಕ್ಕ ವಯಸ್ಸಿನಲ್ಲೇ ಚಿತ್ರರಂಗ ಮತ್ತು ಸಮಾಜ ಸೇವೆಯಲ್ಲಿ ಮಾಡಿದ ಸೇವೆ ಅನನ್ಯ ಎಂದರು.

ಪುಷ್ಪ ನಮನ ಮಾಡಿ ಮೇಣದ ಬತ್ತಿ ಹಚ್ಚುವ ಮುಖಾಂತರ ಶ್ರದ್ಧಾಂಜಲಿ ಅರ್ಪಿಸಲಾಯಿತು.

ಯುವ ಅಭಿಮಾನಿಗಳಾದ ಪ್ರಮೋದ್, ಪ್ರಜ್ವಲ್, ಆಕಾಶ್ ಜರಿಕಟ್ಟೆ, ಶ್ರೇಯಸ್ ಎಸ್.ಜೆ., ನವೀನ್ ಸಿ.ವಿ., ತನಿಷ್ಕ್ ಬಾದಾಮಿ, ಪೃಥ್ವಿ, ಯಶವಂತ್ ಆರ್.ಎಸ್., ಶೋಭಿತ್, ತೇಜಸ್, ದಕ್ಷಿತ್, ಅಭಯ್ ರಾಜ್, ಪ್ರಫುಲ್, ನಿಖಿಲ್, ಮಂಜು, ಭರತ್, ರಘು, ಕಾರ್ತಿಕ್ ಮತ್ತು ಇತರರು ಶ್ರದ್ಧಾಂಜಲಿ ಸಭೆಯಲ್ಲಿ ಉಪಸ್ಥಿತರಿದ್ದರು.

# 68ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ ತಾತ್ಕಾಲಿಕ ಮುಂದೂಡಿಕೆ

ದಾವಣಗೆರೆ, ನ.12- ನಾಡಿದ್ದು ದಿನಾಂಕ14 ರಿಂದ 20 ರವರೆಗೆ ಸಹಕಾರ ಸಪ್ತಾಹವನ್ನು ದೇಶದಾದ್ಯಂತ ಆಚರಿಸ ಲಾಗುತ್ತಿದೆ. ಆದರೆ, ರಾಜ್ಯದಲ್ಲಿ ವಿಧಾನ ಪರಿಷತ್ ಚುನಾವಣೆ ನಿಗದಿಯಾಗಿರುವುದರಿಂದ ತಾತ್ಕಾಲಿಕವಾಗಿ ಸಹಕಾರ ಸಪ್ತಾಹವನ್ನು ಮುಂದೂಡಲಾಗಿದೆ ಎಂದು ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಎನ್.ಎ.ಮುರುಗೇಶ್ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಆದೇಶದಂತೆ ವಿಧಾನ ಪರಿಷತ್ ಚುನಾವಣೆ ಮಾದರಿ ನೀತಿ ಸಂಹಿತೆ ಜಾರಿಯಲ್ಲಿ ಇರುವ ಕಾರಣ ಯಾವುದೇ ಸಮಾರಂಭ ನಡೆಸಲು ಅವಕಾಶ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ 68ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಯನ್ನು ತಾತ್ಕಾಲಿಕ ಮುಂದೂಡಲಾಗಿದೆ ಎಂದು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ 68ನೇ ಅಖಿಲ ಭಾರತ ಸಹಕಾರ ಸಪ್ತಾಹದ ಅಂಗವಾಗಿ ನಾಡಿದ್ದು ದಿನಾಂಕ 14 ರಂದು ಭಾನುವಾರ ಬೆಳಗ್ಗೆ 7.30 ಕ್ಕೆ ಸಪ್ತವರ್ಣದ ಸಹಕಾರ ಧ್ವಜಾರೋಹಣವನ್ನು ಜಿಲ್ಲೆಯ ಎಲ್ಲಾ ವರ್ಗದ ಸಹಕಾರ ಬ್ಯಾಂಕುಗಳು, ಸಂಘಗಳು ತಮ್ಮ ಸಂಘದ ಕಛೇರಿ ಆವರಣದಲ್ಲಿ ಸಾಂಕೇತಿಕವಾಗಿ ನೆರವೇರಿಸಿ, ಇದೇ ದಿನಾಂಕ 20ರ ಶನಿವಾರ ಸಂಜೆ 5.30 ಕ್ಕೆ ಧ್ವಜವನ್ನು ಕೆಳಗಿಳಿಸಲು ಮುರುಗೇಶ್ ಅವರು ಕೋರಿದ್ದಾರೆ.

## ನಗರದ ಪಂಚಮಸಾಲಿ ಸಮಾಜದಲ್ಲಿ ಇಂದು ವಿಚಾರ ಸಂಗಮ

ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ನೌಕರರ ಘಟಕದ ವತಿಯಿಂದ ಇಂದು ಸಂಜೆ 6 ಘಂಟೆಗೆ ಪಂಚಮಸಾಲಿ ಸಮಾಜದ ಕಚೇರಿಯಲ್ಲಿ ಕೊಟ್ಟೂರಿನ ಶಿಕ್ಷಕ ಕೆ.ಎಂ. ರವಿಪ್ರಸಾದ್ ಅವರಿಂದ ವಿಚಾರ ಸಂಗಮ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಮೂಢನಂಬಿಕೆಗಳ ಬಗ್ಗೆ ಅರಿವು ಮೂಡಿಸುವ, ಪವಾಡ ರಹಸ್ಯ ಬಯಲು ವಿಷಯ ಕುರಿತು ರವಿಪ್ರಸಾದ್ ಮಾತನಾಡಲಿದ್ದಾರೆ. ನೀರಿನಿಂದ ದೀಪ ಹಚ್ಚುವುದು, ಬತ್ತಿ ಇಲ್ಲದೆ ದೀಪ ಹಚ್ಚುವುದು, ತೆಂಗಿನ ಕಾಯಿಯಿಂದ ದೆವ್ವ ಬಿಡಿಸುವುದು ಇತ್ಯಾದಿ ಪವಾಡ ಬಯಲು ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಡಲಿದ್ದಾರೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಸಮಾಜದ ಜಿಲ್ಲಾ ಅಧ್ಯಕ್ಷ ಬಿ.ಸಿ. ಉಮಾಪತಿ ನೆರವೇರಿಸಲಿದ್ದು, ಅತಿಥಿಗಳಾಗಿ ಸಮಾಜದ ಜಿಲ್ಲಾ ಕಾರ್ಯಾಧ್ಯಕ್ಷ ಬಿ. ಲೋಕೇಶ್ ಹಾಗೂ ಜಿಲ್ಲಾ ನೌಕರರ ಘಟಕದ ಅಧ್ಯಕ್ಷ ಎಸ್. ಮಲ್ಲಿನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಧರ್ ತಿಳಿಸಿದ್ದಾರೆ.

## ಮಲೇಬೆನ್ನೂರಿನಲ್ಲಿಂದು, ಕ್ರಿಕೆಟ್ ಟೂರ್ನಿ

ರಾಕ್ ಕ್ರಿಕೆಟರ್ಸ್ ವತಿಯಿಂದ ನಟ ಪುನೀತ್ ರಾಜಕುಮಾರ್ ಅವರ ಪುಣ್ಯ ಸ್ಮರಣೆ ಅಂಗವಾಗಿ ಇಂದು ಮತ್ತು ನಾಳೆ ಟೆನ್ನಿಸ್ ಬಾಲ್ ಮಿನಿ ಬೌಂಡರಿ ಕ್ರಿಕೆಟ್ ಟೂರ್ನಿಯನ್ನು ಬಸವೇಶ್ವರ ಬಡಾವಣೆಯ ಬನ್ನಿಕಟ್ಟೆ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಉದ್ಘಾಟನೆ: ಬಿ.ಪಿ. ಹರೀಶ್, ಮುಖ್ಯ ಅತಿಥಿಗಳು: ಹನಗವಾಡಿ ವೀರೇಶ್, ಬಿ.ಎಂ. ವಾಗೀಶ್ ಸ್ವಾಮಿ, ಪಿ.ಎಸ್.ಐ ರವಿಕುಮಾರ್, ಪುರಸಭೆ ಸಿಇಒ ಡೊಂಬರ್, ಹಾಲಿವಾಣ ಗ್ರಾ.ಪಂ. ಅಧ್ಯಕ್ಷ ಐ.ಪಿ. ರಂಗನಾಥ್, ಬಿ. ವೀರಯ್ಯ, ಬಿ. ಮಂಜುನಾಥ್, ಪಿ.ಆರ್. ರಾಜು ಮತ್ತಿತರರು

# ಕಾನೂನಿನ ಅರಿವಿಗಾಗಿ ಪ್ರಾಧಿಕಾರದ ಅಭಿಯಾನ



ಬೈಕ್ ರ್‍ಯಾಲಿ, ವಸ್ತು ಪ್ರದರ್ಶನ, ರಂಗೋಲಿ, ಚಿತ್ರ ಪ್ರದರ್ಶನ

ದಾವಣಗೆರೆ, ನ. 12 - ಗ್ರಾಮೀಣರು ಹಾಗೂ ಬಡವರಿಗೆ ಕಾನೂನು ಅರಿವು ಮೂಡಿಸಲು ಕಾನೂನು ಸೇವಾ ಪ್ರಾಧಿಕಾರ ಮನೆ ಮನೆಗೆ ತೆರಳಿ ಅಭಿಯಾನ ನಡೆಸಲಾಗುತ್ತಿದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷೆಯೂ ಆಗಿರುವ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಮೂರ್ತಿ ರಾಜೇಶ್ವರಿ ಎನ್. ಹೆಗಡೆ ತಿಳಿಸಿದ್ದಾರೆ.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಅಭಿಯೋಜನೆ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಪ್ಯಾನ್ ಇಂಡಿಯಾ ಅವೇರ್‌ನೆಸ್ ಅಂಡ್ ಔಟ್‌ರೀಚ್ ಅಂಗವಾಗಿ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಯಲ್ಲಿ ಆಯೋಜಿಸಲಾಗಿದ್ದ ಸರ್ಕಾರಿ ಸೌಲಭ್ಯ ವಿತರಣೆ ಹಾಗೂ ವಸ್ತು ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಅಕ್ಟೋಬರ್ 2ರಿಂದ ನವೆಂಬರ್ 14ರವರೆಗೆ ಕಾನೂನು ಸೇವಾ ಪ್ರಾಧಿಕಾರದಿಂದ ಜನರಲ್ಲಿ ಕಾನೂನಿನ ಕುರಿತು ಅರಿವು ಮೂಡಿಸಲು ನಿರಂತರ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ಶಾಲಾ ಮಕ್ಕಳಿಂದ ಚಿತ್ರಕಲೆ, ಪ್ರಬಂಧ ಸ್ಪರ್ಧೆ, ಚಿತ್ರ ನಿರ್ಮಾಣ ಸ್ಪರ್ಧೆಗಳನ್ನೂ ಆಯೋಜಿಸಲಾಗಿತ್ತು. ಮಕ್ಕಳು ರಚಿಸಿದ ಚಿತ್ರಗಳನ್ನು ಪ್ರದರ್ಶನಕ್ಕಿಡಲಾಗಿದೆ ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಮೂರ್ತಿ ಜೆ.ವಿ. ವಿಜಯಾನಂದ, ಕಾನೂನು ಸೇವಾ ಪ್ರಾಧಿಕಾರ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ಮಗುವೊಂದು ಆಟವಾಡುವ ಹಕ್ಕು ನಮಗಿದೆ ಎಂದು ತಿಳಿಸಿದೆ. ಇದು ಮಗುವಿನ ಸಾಮಾನ್ಯ ಜ್ಞಾನ ತೋರಿಸುತ್ತದೆ. ಆದರೆ, 18 ವರ್ಷದೊಳಗಿನವರಿಗೆ ವಾಹನ ಓಡಿಸಲು ಕೊಡುವ ಪೋಷಕರಿಗೆ ಇಂತಹ ಸಾಮಾನ್ಯ ಜ್ಞಾನ ಇಲ್ಲದಂತಾಗಿದೆ ಎಂದು ವಿಷಾದಿಸಿದರು.

ಸರ್ಕಾರಿ ಅಭಿಯೋಜಕ ಎಸ್.ವಿ. ಪಾಟೀಲ್ ಮಾತನಾಡಿ, ಅಕ್ಷರ ಕಲಿತಂತೆಯೇ ಕಾನೂನು ತಿಳಿಯಬೇಕು. ಕಾನೂನು ಅರಿತರೆ ಜಯ ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದ ವೇದಿಕೆಯ ಮೇಲೆ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಮೂರ್ತಿ ಎನ್. ಶ್ರೀಪಾದ್, ನ್ಯಾಯಮೂರ್ತಿಗಳಾದ ಬಿ. ದಶರಥ, ಪ್ರೀತಿ ಸದರ ಜೋಷಿ, ಹಿರಿಯ ಸಿವಿಲ್ ನ್ಯಾಯಮೂರ್ತಿಯೂ ಆಗಿರುವ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಸಕ ಕೆ.ಹೆಚ್. ವಿಜಯ ಕುಮಾರ್, ಡಿಡಿಪಿಐ ಜಿ.ಆರ್. ತಿಪ್ಪೇಶಪ್ಪ, ದಾವಣಗೆರೆ ದಕ್ಷಿಣ ವಲಯದ ಬಿಇಒ ನಿರಂಜನ, ಉತ್ತರ ವಲಯದ ಬಿಇಒ ಟಿ. ಅಂಬಣ್ಣ ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಡಿ.ಪಿ. ಬಸವರಾಜ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

**ಪ್ರದರ್ಶನ - ರ್‍ಯಾಲಿ :** ಈ ಸಂದರ್ಭದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಐ.ಸಿ.ಡಿ.ಎಸ್. ಕಾರ್ಯಕ್ರಮದ ಅರಿವು ಮೂಡಿಸುವ ರಂಗೋಲಿಗಳನ್ನು ವಿವಿಧ ಕಾಳುಗಳಲ್ಲಿ ರಚಿಸಿದ್ದರು. ಭಾಗ್ಯಲಕ್ಷ್ಮಿ, ಸಖಿ, ಮಾತೃವಂದನ, ಪೋಷಣ ಅಭಿಯಾನ ಸೇರಿದಂತೆ, ಹಲವಾರು ಯೋಜನೆಗಳ ಭಿತ್ತಿಪತ್ರಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

ಇದಕ್ಕೂ ಮುಂಚೆ ಜಿಲ್ಲಾ ನ್ಯಾಯಾಲಯದಿಂದ ಶಿಕ್ಷಣ ತರಬೇತಿ ಸಂಸ್ಥೆಯವರೆಗೆ ನಡೆದ ಬೈಕ್ ರ್‍ಯಾಲಿಯಲ್ಲಿ ನ್ಯಾಯಮೂರ್ತಿಗಳು, ವಕೀಲರು, ಪೊಲೀಸರು ಮತ್ತಿತರರು ಭಾಗವಹಿಸಿದ್ದರು.

# ನಗರದಲ್ಲಿ ನಾಳೆ ವಿಶ್ವ ಮಧುಮೇಹ ದಿನಾಚರಣೆ

ದಾವಣಗೆರೆ, ನ.12- ನಗರದ ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಟ್ರಸ್ಟ್ ಮತ್ತು ಆಸ್ಪತ್ರೆ ವತಿಯಿಂದ ದಿ.ಆಲೂರು ಚಂದ್ರಶೇಖರಪ್ಪ ಅವರ ಜ್ಞಾಪಕಾರ್ಥವಾಗಿ ಹಾಗೂ ವಿಶ್ವ ಮಧುಮೇಹ ದಿನಾಚರಣೆ ಅಂಗವಾಗಿ ಆಸ್ಪತ್ರೆಯಲ್ಲಿ 37ನೇ ವಿಶ್ವ ಮಧುಮೇಹ ಮೇಳ ಕಾರ್ಯಕ್ರಮ ಹಮ್ಮಿಕೊಂಡಿರುವುದಾಗಿ ಡಾ. ಮಂಜುನಾಥ ಆಲೂರು ತಿಳಿಸಿದರು.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಸುನಂದಮ್ಮ ಚಂದ್ರಶೇಖರಪ್ಪ ಆಲೂರು ವಹಿಸಿಕೊಳ್ಳಲಿದ್ದಾರೆ ಎಂದು ಹೇಳಿದರು.

ಕಳೆದ 40 ವರ್ಷಗಳಿಂದ ಆಲೂರು ಆಸ್ಪತ್ರೆಯು ಸಕ್ಕರೆ ಕಾಯಿಲೆ ರೋಗಿಗಳಿಗೆ ಚಿಕಿತ್ಸೆ, ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದು, ಹೊರ ರೋಗಿ ವಿಭಾಗದಿಂದ 1 ಲಕ್ಷಕ್ಕಿಂತ ಹೆಚ್ಚಿನ ಜನರಿಗೆ ಶುಶ್ರೂಷೆ ನೀಡಲಾಗಿದೆ. ಸಕ್ಕರೆ ಕಾಯಿಲೆವುಳ್ಳ 150 ಮಕ್ಕಳಿಗೆ 30 ವರ್ಷಗಳಿಂದ ಉಚಿತವಾಗಿ ಇನ್ಸುಲಿನ್ ಹಾಗೂ ಗ್ಲೂಕೋಮೀಟರ್ ನೀಡಲಾಗಿದೆ ಎಂದರು.

> **ಸಕ್ಕರೆ ಖಾಯಿಲೆ ಬಗ್ಗೆ ಸೂಕ್ತ ಮಾಹಿತಿ ಪಡೆದು ಜೀವನ ಶೈಲಿ ಬದಲಿಸಿಕೊಂಡರೆ ದೀರ್ಘ ಕಾಲ ಬದುಕಬಹುದು. ನಿರ್ಲಕ್ಷಿಸಿದರೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಆರಂಭಿಕ ದಿನಗಳಲ್ಲಿಯೇ ಎಚ್ಚರಿಕೆ ವಹಿಸುವುದು ಅಗತ್ಯ.**
> **- ಡಾ. ಮಂಜುನಾಥ್ ಆಲೂರು**

ಡಾ.ವರುಣ ಚಂದ್ರ ಆಲೂರು ಮಾತನಾಡಿ, ಇನ್‌ಸುಲಿನ್ ಬಳಕೆ ಆರಂಭಿಸಿ ನೂರು ವರ್ಷಗಳು ತುಂಬಿದರೂ, ಇನ್ನೂ ಅದರ ಉಪಯೋಗ ಎಲ್ಲರಿಗೂ ತಲುಪುತ್ತಿಲ್ಲ. ಈ ಹಿನ್ನೆಲೆಯಲ್ಲಿ ವಿಶ್ವ ಮಧುಮೇಹ ಮೇಳವನ್ನು ಇನ್ಸುಲಿನ್ ಈಗಲ್ಲದಿದ್ದರೆ ಇನ್ನಾವಾಗ ? ಎಂಬ ಘೋಷಣೆಯಡಿ ಆಚರಿಸಲಾಗುತ್ತಿದೆ ಎಂದರು.

ಕಾರ್ಯಕ್ರಮದ ಅಂಗವಾಗಿ ನಾಡಿದ್ದು ದಿನಾಂಕ 14ರ ಭಾನುವಾರ ಆಲೂರು ಆಸ್ಪತ್ರೆಯಲ್ಲಿ ಬೆಳಿಗ್ಗೆ 7 ರಿಂದ ಉಚಿತವಾಗಿ ರಕ್ತ ಪರೀಕ್ಷೆ ನಡೆಸಲಾಗುವುದು. ನಂತರ ಸಕ್ಕರೆ ಕಾಯಿಲೆ ಬಗ್ಗೆ ನುರಿತ ತಜ್ಞರು ಮಾಹಿತಿ ನೀಡಲಿದ್ದಾರೆ ಎಂದು ತಿಳಿಸಿದರು.

ಜೆಜೆಎಂ ಕಾಲೇಜಿನ ಇಎನ್‌ಟಿ ಮುಖ್ಯಸ್ಥ ಡಾ.ಕೆ.ಪಿ. ಬಸವರಾಜ್, ಇತ್ತೀಚೆಗೆ ಸಕ್ಕರೆ ಕಾಯಿಲೆ ಇದ್ದವರು ಬ್ಲಾಕ್ ಫಂಗಸ್ ಕಾಯಿಲೆಗೆ ತುತ್ತಾಗಬೇಕಾಯಿತು. ಆದ್ದರಿಂದ ಎಚ್ಚರಿಕೆ ವಹಿಸುವುದು ಸೂಕ್ತ ಎಂದರು.

# ಮಹಾನಗರ ಪಾಲಿಕೆಯ ಸಿಬ್ಬಂದಿಯನ್ನು ಅನ್ಯ ಕೆಲಸಗಳಿಗೆ ಬಳಸುವುದು ಸೂಕ್ತವಲ್ಲ



ದಾವಣಗೆರೆ, ನ.12- ಈಗಾಗಲೇ ಎಲ್ಲಾ ವಾರ್ಡ್‌ಗಳಲ್ಲಿ ಕೋವಿಡ್ ಲಸಿಕೆ ಶೇ.80 ರಷ್ಟು ಗುರಿ ಮುಟ್ಟುವ ಹಂತಕ್ಕೆ ನೀಡಲಾಗಿದೆ. ಆದರೆ, ವಾಸ್ತವವಾಗಿ ಈಗಲೂ ಕೂಡ ಪಾಲಿಕೆಯ ಸಿಬ್ಬಂದಿಯನ್ನು ಕೋವಿಡ್ ಲಸಿಕೆ ನೀಡುವ ಕಾರಣ ಹೇಳಿ, ಪ್ರತಿದಿನ ಪಾಲಿಕೆಯಿಂದ ಹೊರಹೋಗುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ಪಾಲಿಕೆಯಲ್ಲಿ ಜನನ ಮತ್ತು ಮರಣ ಹಾಗೂ ಆರೋಗ್ಯ ಇಲಾಖೆ ಕಂದಾಯ ಇಲಾಖೆಯವರು ಸಿಗದೇ ತೊಂದರೆಯಾಗಿದೆ.

ಇದರಿಂದ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ತುಂಬಾ ಅನಾನುಕೂಲವಾಗಿದೆ. ಎಲ್ಲಾ ವಾರ್ಡ್‌ಗಳಲ್ಲಿ ಸಿಬ್ಬಂದಿಯನ್ನು ಬಳಸಿಕೊಳ್ಳದೆ, ಅವಶ್ಯವಿದ್ದಲ್ಲಿ ಲಸಿಕೆ ಪೂರ್ಣ ಪ್ರಮಾಣದಲ್ಲಿ ತೆಗೆದುಕೊಳ್ಳದ ವಾರ್ಡ್‌ಗಳಲ್ಲಿ ಜಿಲ್ಲಾಸ್ಪತ್ರೆಯ ಆರೋಗ್ಯ ಕೇಂದ್ರದ ಸಿಬ್ಬಂದಿಯನ್ನು ಬಳಸಿ ಕೋವಿಡ್ ಲಸಿಕೆ ನೀಡಿ, ಪಾಲಿಕೆ ಸಿಬ್ಬಂದಿಯನ್ನು ಪಾಲಿಕೆಯ ಕಚೇರಿ ಆವರಣದಲ್ಲಿ ಕಾರ್ಯನಿರ್ವಹಿಸಲು ಬಿಡಿ ಎಂದು ವಿರೋಧ ಪಕ್ಷದ ನಾಯಕ ಎ. ನಾಗರಾಜ್ ಅವರು ಒತ್ತಾಯಿಸಿ, ಈ ಕೂಡಲೇ ಜಿಲ್ಲಾಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳಲಿ ಎಂದು ಆಗ್ರಹಿಸಿದ್ದಾರೆ.

# ಚರಂಡಿ ಸ್ವಚ್ಛಗೊಳಿಸಿದ ಗುಡಾಳ್ ಗ್ರಾ.ಪಂ.ಸದಸ್ಯ



ದಾವಣಗೆರೆ, ನ.12- ತಾಲ್ಲೂಕಿನ ಗುಡಾಳ್ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಬರುವ ಹೊಸಹಳ್ಳಿ ಗ್ರಾಮದಲ್ಲಿ ಚರಂಡಿಗಳು ತುಂಬಿ ದುರ್ವಾಸನೆ ಬೀರಿ, ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗುತ್ತಿದ್ದ ಹಿನ್ನೆಲೆಯಲ್ಲಿ ಸ್ವಚ್ಛತೆಗೆ ಕ್ರಮ ಕೈಗೊಳ್ಳುವಂತೆ ಗುಡಾಳ್ ಗ್ರಾ.ಪಂ. ಪಿಡಿಒ ಅವರಿಗೆ ಸೂಚಿಸಿದರೂ, ನಿರ್ಲಕ್ಷ್ಯ ವಹಿಸಿದ್ದರಿಂದ ಸ್ಥಳೀಯ ಗ್ರಾ.ಪಂ. ಸದಸ್ಯ ಕುಮಾರ ನಾಯ್ಕ ಟಿ. ಅವರೇ ಚರಂಡಿ ಸ್ವಚ್ಛಗೊಳಿಸಿದರು.

# ಮಹರ್ಷಿ ವಾಲ್ಮೀಕಿ ತತ್ವಾದರ್ಶಗಳು ಎಲ್ಲರಿಗೂ ಮಾದರಿ

**ಜಗಳೂರಿನ ಶಾಸಕ ಎಸ್.ವಿ. ರಾಮಚಂದ್ರ**



ಜಗಳೂರು, ನ.12- ಜೀವನದಲ್ಲಿ ಆಸ್ತಿ, ಅಂತಸ್ತು ಮಾಡುವ ಬದಲು ಮಕ್ಕಳಿಗೆ ಶಿಕ್ಷಣ ಕೊಡಿಸಿದರೆ ಮುಂದೆ ಅವರು ಕುಟುಂಬಕ್ಕೆ ಆಸರೆಯಾಗಿ ನಿಲ್ಲುತ್ತಾರೆ ಎಂದು ಶಾಸಕ ಎಸ್.ವಿ. ರಾಮಚಂದ್ರ ಹೇಳಿದರು.

ತಾಲ್ಲೂಕಿನ ಹೊಸಹಟ್ಟಿ ಗ್ರಾಮದಲ್ಲಿ ಗುರುವಾರ ವಾಲ್ಮೀಕಿ ಯುವಕರ ಸಂಘದಿಂದ ಹಮ್ಮಿಕೊಂಡಿದ್ದ ವಾಲ್ಮೀಕಿ ಜಯಂತ್ಯುತ್ಸವ ಹಾಗೂ ನೂತನ ವಾಲ್ಮೀಕಿ ಮಹರ್ಷಿ ಪುತ್ಥಳಿಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಆದಿಯಲ್ಲಿ ಮಹರ್ಷಿ ವಾಲ್ಮೀಕಿ ಒಬ್ಬ ಬೇಟೆಗಾರನಾಗಿದ್ದರೂ ತಾನೂ ಮಾಡುತ್ತಿರುವುದು ಹಿಂಸೆ ಎಂದು ಅರಿತು, ತಪಸ್ಸು ಮಾಡಿದರು. ನಂತರ ರಾಮಾಯಣ ಮಹಾ ಕಾವ್ಯವನ್ನು ರಚಿಸಿ, ಜಗತ್ತಿಗೇ ಮಹರ್ಷಿ ಎನಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ತಪ್ಪು ದಾರಿಗಳನ್ನು ಬಿಟ್ಟು, ಶಿಕ್ಷಣವಂತರಾಗಿ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಸಲಹೆ ನೀಡಿದರು.

ಜೀವನದಲ್ಲಿ ಎಷ್ಟೇ ಕಷ್ಟ, ನೋವು ಬಂದರೂ ಮಕ್ಕಳನ್ನು ಶಾಲೆಯಿಂದ ಬಿಡಿಸಿ ಕೆಲಸಕ್ಕೆ ಹಾಕುವುದು ಬೇಡ, ಸರ್ಕಾರ ಎಲ್ಲಾ ಬಡ ಮಕ್ಕಳಿಗೆ ಉಚಿತ ಶಿಕ್ಷಣ, ವಸತಿ ಸೇರಿದಂತೆ ಅನೇಕ ಸೌಲಭ್ಯಗಳನ್ನು ಕಲ್ಪಿಸಿದೆ. ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ವಕೀಲ ಮರೇನಹಳ್ಳಿ ಬಸವರಾಜ್ ಮಾತನಾಡಿ, ಡಾ. ಬಿ.ಆರ್. ಅಂಬೇಡ್ಕರ್ ಭಾರತ ಸಂವಿಧಾನವನ್ನು ಬರೆಯದೇ ಹೋಗಿದ್ದರೆ ದಲಿತರು, ಹಿಂದುಳಿದವರು ನೆಮ್ಮದಿಯ ಬದುಕು ರೂಪಿಸಿಕೊಳ್ಳುವುದು ಕನಸಿನ ಮಾತಾಗಿತ್ತು. ತಾವು ನೋವುಂಡರೂ ಎಲ್ಲರಿಗೂ ಸಮಾನತೆಯಿಂದ ಬದುಕಲು ದಾರಿ ತೋರಿಸಿದ್ದಾರೆ. ಅವರನ್ನು ಮನೆ, ಮನಗಳಲ್ಲೂ ಪೂಜಿಸಬೇಕು ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಉಪಾಧ್ಯಕ್ಷ ಅಣಬೂರು ಕೊಟ್ರೇಶ್ ಮಾತನಾಡಿ, ಮಹಾನ್ ದಾರ್ಶನಿಕರ ಜಯಂತಿಗಳನ್ನು ಕೇವಲ ಒಂದು ದಿನಕ್ಕೆ ಸೀಮಿತ ಮಾಡಿಕೊಳ್ಳದೇ ಪ್ರತಿ ದಿನ ಅವರ ಜೀವನದ ಚರಿತ್ರೆಗಳನ್ನು ಓದಿ, ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ದೊಣೆಹಳ್ಳಿ ಗ್ರಾ.ಪಂ. ಅಧ್ಯಕ್ಷರಾದ ಜಿ.ಟಿ. ರೋಜಾ ತಿಪ್ಪೇಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಗ್ರಾ.ಪಂ. ಸದಸ್ಯರಾದ ಎಂ.ಜಿ. ಸಿದ್ದಲಿಂಗಪ್ಪ, ಗುರುಮೂರ್ತಿ, ರಾಜು, ಜಯ್ಯಣ್ಣ, ವಿಎಸ್‌ಎಸ್‌ಎನ್ ಅಧ್ಯಕ್ಷ ಬಿಸ್ತುವಳ್ಳಿ ಬಾಬು, ನೌಕರರ ಸಂಘದ ಮಾಜಿ ಕಾರ್ಯದರ್ಶಿ ಬಿ.ಆರ್. ಚಂದ್ರಪ್ಪ, ಮುಖಂಡರಾದ ವೀರೇಶ್ ಇನ್ನಿತರರಿದ್ದರು.

## ನಂದಿಗುಡಿ : ಭಕ್ತರ ಸಭೆ



ಮಲೇಬೆನ್ನೂರು, ನ.12 - ನಂದಿಗುಡಿ ಬೃಹನ್ಮಠದಲ್ಲಿ ನಾಡಿದ್ದು ದಿನಾಂಕ 14ರ ಭಾನುವಾರ ಬೆಳಗ್ಗೆ 11 ಗಂಟೆಗೆ ದಾವಣಗೆರೆ, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಗಳ ಭಕ್ತರ ಸಭೆಯನ್ನು ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ಕರೆಯಲಾಗಿದೆ.

ಡಿಸೆಂಬರ್ 13 ರಂದು ಮಠದಲ್ಲಿ ಹಮ್ಮಿಕೊಂಡಿರುವ ಆದಿ ಜಗದ್ಗುರು ಶ್ರೀ ಕೆಂಚವೀರೇಶ್ವರ ಮಹಾ ಶಿವಯೋಗಿಗಳವರ ಸಂಸ್ಮರಣೆ ಕುರಿತು ಚರ್ಚಿಸಲಾಗುವುದೆಂದು ಜಿಗಳಿಯ ಇಂದೂಧರ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ರಕ್ತದ ಗುಂಪು ಪರೀಕ್ಷೆ

ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ 'ರೆಡ್ ರಿಬ್ಬನ್ ಕ್ಲಬ್ ಹಾಗೂ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ ಜಿಲ್ಲಾ ಘಟಕ ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ 'ಉಚಿತ ರಕ್ತದ ಗುಂಪು ಪರೀಕ್ಷಾ ಶಿಬಿರ ನಡೆಯಲಿದೆ. ಕಾರ್ಯಕ್ರಮವನ್ನು ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯ ಅಧ್ಯಕ್ಷ ಡಾ. ಎ.ಎಂ. ಶಿವಕುಮಾರ್ ಉದ್ಘಾಟಿಸುವರು. ಪ್ರಾಂಶುಪಾಲ ಡಾ. ಬಿ.ಪಿ. ಕುಮಾರ್ ಅಧ್ಯಕ್ಷತೆ ವಹಿಸುವರು.

## ನಗರಕ್ಕೆ ಇಂದು 'ಮುಗಿಲ್‌ಪೇಟೆ' ಚಿತ್ರ ತಂಡ

ಕ್ರೇಜಿ ಸ್ಟಾರ್ ವಿ. ರವಿಚಂದ್ರನ್ ಪುತ್ರ ನಟ ಮನೋರಂಜನ್ ಹಾಗೂ ಚಿತ್ರ ತಂಡದವರು ನಗರಕ್ಕೆ ಆಗಮಿಸಲಿದ್ದಾರೆ.

ಬೆಳಗ್ಗೆ 10 ಗಂಟೆಗೆ ನಗರ ದೇವತೆ ಶ್ರೀ ದುಗ್ಗಮ್ಮ ದೇವಿಯ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ, ನಂತರ 'ಮುಗಿಲ್‌ಪೇಟೆ' ಸಿನಿಮಾ ಪ್ರಮೋಷನ್‌ಗಾಗಿ ಇಲ್ಲಿನ ನೂತನ ಮತ್ತು ದವನ್ ಕಾಲೇಜುಗಳಿಗೆ ಮಧ್ಯಾಹ್ನ 1 ಗಂಟೆಗೆ ಹಾಗೂ ಸಿದ್ಧಗಂಗಾ ಕಾಲೇಜಿಗೆ ಸಂಜೆ 6 ಗಂಟೆಗೆ ಭೇಟಿ ನೀಡಲಿದ್ದಾರೆ.

ಶಾಮನೂರಿನಲ್ಲಿ ಸಂಜೆ ಆಯೋಜಿಸಿರುವ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅಲ್ಲಿಯೇ ಮುಗಿಲ್‌ಪೇಟೆ ಸಿನಿಮಾದ ಧ್ವನಿಸುರುಳಿ ಬಿಡುಗಡೆಗೊಳಿಸಲಿದ್ದಾರೆ ಎಂದು ಸಿಪಾಯಿ ರವಿಚಂದ್ರನ್ ಸೇನೆಯ ಸಂಘದ ರಾಜ್ಯ ಉಪಾಧ್ಯಕ್ಷ ಬಿ.ಎನ್. ರಂಗನಾಥಸ್ವಾಮಿ, ಮಹಾನಗರ ಪಾಲಿಕೆ ಸದಸ್ಯ ಕಲ್ಲಳ್ಳಿ ನಾಗರಾಜ್ ತಿಳಿಸಿದ್ದಾರೆ.

# ಗುಪ್ತವಾರ್ತೆಯ ಬೆಳಗಿನ ನಡಿಗೆ-ಆರೋಗ್ಯದ ಕಡೆಗೆ

**ಅಧಿಕಾರಿಗಳು, ಸಿಬ್ಬಂದಿಗಳಿಂದ 10 ಕಿ.ಮೀ. ಆರೋಗ್ಯ ನಡಿಗೆ**




ದಾವಣಗೆರೆ, ನ.12- ಬೆಳಗಿನ ನಡಿಗೆ-ಆರೋಗ್ಯದ ಕಡೆಗೆ ಎಂಬ ಸಂದೇಶದೊಂದಿಗೆ ರಾಜ್ಯ ಗುಪ್ತವಾರ್ತೆ ದಾವಣಗೆರೆ ಘಟಕ ಹಾಗೂ ನಾಗರಿಕ ಹಕ್ಕು ನಿರ್ದೇಶನಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಇಂದು ಮುಂಜಾನೆ ನಗರದಲ್ಲಿ 10 ಕಿಲೋ ಮೀಟರ್‌ಗಳ ಆರೋಗ್ಯ ನಡಿಗೆಯ ಮುಖೇನ ಸಾರ್ವಜನಿಕರ ಗಮನ ಸೆಳೆದರು.

ಕುಂದವಾಡ ಕೆರೆಯನ್ನು ಎರಡು ಸುತ್ತು ಹಾಕಿ ಹತ್ತು ಕಿಲೋಮೀಟರ್ ದೂರದ ಆರೋಗ್ಯ ನಡಿಗೆ ಮಾಡಿ ಬೆಳಗಿನ ನಡಿಗೆ ಮುಖೇನ ಸ್ವಸ್ಥ ಆರೋಗ್ಯ ಕಂಡುಕೊಳ್ಳುವಂತೆ ಜನತೆಯಲ್ಲಿ ಅರಿವು ಮೂಡಿಸಿದರು.

ಈ ನಡಿಗೆಗೆ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಎಸ್ಪಿ ಗೋಪಾಲ್ ಚಾಲನೆ ನೀಡಿದರು.

ರಾಜ್ಯ ಗುಪ್ತಚರ ಇಲಾಖೆ ಡಿವೈಎಸ್ಪಿ ಎಸ್. ಕೆ. ಪ್ರಹ್ಲಾದ್, ಸಬ್ ಇನ್‌ಸ್ಪೆಕ್ಟರ್ ಹೆಚ್. ಜಗದೀಶ್, ಸಿಬ್ಬಂದಿಗಳು ಹಾಗೂ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಇನ್‌ಸ್ಪೆಕ್ಟರ್ ಕೃಷ್ಣ ನಾಯ್ಕ್, ಸಬ್ ಇನ್‌ಸ್ಪೆಕ್ಟರ್ ಉಮೇಶ್ ಬಾಬು ಸೇರಿದಂತೆ ಸಿಬ್ಬಂದಿಗಳು ಭಾಗವಹಿಸಿದ್ದರು.

# 3.42 ಕೆಜಿ ನಕಲಿ ಬಂಗಾರ ವಶ: ಐವರ ಬಂಧನ





ದಾವಣಗೆರೆ, ನ.12- ನಕಲಿ ಬಂಗಾರ ಮಾರಾಟದ ವೇಳೆ ದಾಳಿ ನಡೆಸಿರುವ ಸಿಇಎನ್ ಅಪರಾಧ ಪೊಲೀಸರು ಐವರನ್ನು ಬಂಧಿಸಿ, 3.42 ಗ್ರಾಂ ನಕಲಿ ಬಂಗಾರ ಹಾಗೂ ಕೃತ್ಯಕ್ಕೆ ಬಳಸಿದ ಕಾರು ಮತ್ತು ಬೈಕ್ ವಶಪಡಿಸಿಕೊಂಡಿದ್ದಾರೆ.

ನಗರದ ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿರುವ ಸ್ಟೇಡಿಯಂ ಹತ್ತಿರ ನಕಲಿ ಬಂಗಾರವನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದ ಅಕ್ರಮ ಜಾಲದ ಮೇಲೆ ಡಿಸಿಆರ್‌ಬಿ ಘಟಕದ ಪೊಲೀಸ್ ಉಪಾಧೀಕ್ಷಕ ಬಿ.ಎಸ್. ಬಸವರಾಜ ಮಾರ್ಗದರ್ಶನದಲ್ಲಿ ಸಿಇಎನ್ ಪೊಲೀಸ್ ಠಾಣೆ ಪೊಲೀಸ್ ನಿರೀಕ್ಷಕ ಬಿ.ವಿ. ಗಿರೀಶ್ ಹಾಗೂ ಸಿಬ್ಬಂದಿಗಳಾದ ಪ್ರಕಾಶ್, ನಾಗರಾಜ, ಗೋವಿಂದರಾಜು, ಲೋಹಿತ್, ಮಲ್ಲಿಕಾರ್ಜುನ , ಮುತ್ತುರಾಜ , ದ್ಯಾಮೇಶ್ ಒಳಗೊಂಡ ತಂಡವು ದಾಳಿ ಮಾಡಿದೆ.

ಐವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಇನ್ನುಳಿದ ಆರೋಪಿತರ ಪತ್ತೆ ಕಾರ್ಯ ಮುಂದುವರೆದಿದ್ದು, ಈ ಬಗ್ಗೆ ದಾವಣಗೆರೆ ಸಿಇಎನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ನಗರದಲ್ಲಿ ಇಂದು ಪಿಜಿಸಿಇಟಿ, ಡಿಸಿಇಟಿ ಪರೀಕ್ಷೆ

ಪಿಜಿಸಿಇಟಿ ಮತ್ತು ಡಿಸಿಇಟಿ-2021ರ ಸಾಮಾನ್ಯ ಸಾಮರ್ಥ್ಯ ಪರೀಕ್ಷೆಗಳು ಇಂದು - ನಾಳೆ ನಡೆಯಲಿದ್ದು, ಸಂಬಂಧಿಸಿದ ಪರೀಕ್ಷಾ ಕೇಂದ್ರದಲ್ಲಿ ಎಲ್ಲಾ ರೀತಿಯ ಅವ್ಯವಹಾರಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಪರೀಕ್ಷಾ ಕೇಂದ್ರದ ಸುತ್ತಲೂ 200 ಮೀಟರ್ ಪ್ರದೇಶವನ್ನು ಸಾರ್ವಜನಿಕರಿಗೆ ನಿಷೇಧಿತ ಪ್ರದೇಶವೆಂದು ಘೋಷಿಸಿ, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಆದೇಶ ಹೊರಡಿಸಿರುತ್ತಾರೆ.

ಕ್ಷೇತ್ರ ಶಿಕ್ಷಣಾಧಿಕಾರಿ ನಿರಂಜನಮೂರ್ತಿ, ತಹಶೀಲ್ದಾರ್ ಗಿರೀಶ್ ಬಾಬು, ಸ.ಪ.ಪೂರ್ವ ಕಾಲೇಜು ಪ್ರಾಂಶುಪಾಲ ಶ್ರೀನಿವಾಸ ನೇತೃತ್ವದಲ್ಲಿ ತಂಡ ರಚಿಸಲಾಗಿದ್ದು, 5 ಪರೀಕ್ಷಾ ಕೇಂದ್ರಗಳ ಸಂಪೂರ್ಣ ಜವಾಬ್ದಾರಿ ವಹಿಸಲಾಗಿದೆ.

ಇಂದು ಒಂದು ಪರೀಕ್ಷಾ ಕೇಂದ್ರ ಹಾಗೂ ನಾಳೆ ಐದು ಪರೀಕ್ಷಾ ಕೇಂದ್ರಗಳ ಪರೀಕ್ಷೆಗಳು ನಡೆಯಲಿವೆ. ಎಂಟೆಕ್ 336, ಎಂಸಿಎ-552, ಎಂಬಿಎ-984, ಡಿಸಿಇಟಿ-1176 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಬೆಳಿಗ್ಗೆ 10.30 ರಿಂದ 12.30 ಹಾಗೂ ಮಧ್ಯಾಹ್ನ 2.30 ರಿಂದ 4.30 ರವರೆಗೆ ಸಿಇಟಿ ಪರೀಕ್ಷೆಗಳು ನಡೆಯಲಿವೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

## ಹಿಂದುಯಿಸಂ, ಹಿಂದುತ್ವ ಬೇರೆ: ರಾಹುಲ್ ಗಾಂಧಿ

ನವದೆಹಲಿ, ನ. 12 – ಹಿಂದುಯಿಸಂ ಹಾಗೂ ಹಿಂದುತ್ವ ಎರಡೂ ಬೇರೆ ಬೇರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರತಿಪಾದಿಸಿದ್ದಾರೆ.

ಹಿಂದುಯಿಸಂ ಹಾಗೂ ಹಿಂದುತ್ವ ಒಂದೇ ಆಗಿದ್ದರೆ ಅವುಗಳಿಗೆ ಒಂದೇ ಹೆಸರು ಇರಬೇಕಿತ್ತು. ಅವುಗಳಿಗೆ ಏಕೆ ಬೇರೆ ಬೇರೆ ಹೆಸರಿದೆ? ಎರಡೂ ಒಂದೇ ಆಗಿದ್ದರೆ ಹಿಂದುತ್ವ ಎಂಬ ಹೆಸರು ಬಳಸಬೇಕಿತ್ತು. ಹೀಗಾಗಿ ಎರಡೂ ಬೇರೆ ಬೇರೆ ಎಂದವರು ಹೇಳಿದ್ದಾರೆ.

**ಬೇಕಾಗಿದ್ದಾರೆ**

Diploma in Hardware Networking / Software ಆದವರು ಬೇಕಾಗಿದ್ದಾರೆ.
ಅನುಭವವುಳ್ಳ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ.

ಎ.ಕೆ. ಫಾರ್ಮದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.
ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೊರೇಟ್ ತರಬೇತಿ ಇರುತ್ತದೆ.

**ಸಂಪರ್ಕಿಸಿ : ಎ.ಕೆ. ಫಾರ್ಮ**
ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.

**ದೈವಜ್ಞ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ**
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.

**ಪೀಠೋಪಕರಣ ಮಾರಾಟ ಮತ್ತು ಮಳಿಗೆ ಬಾಡಿಗೆಗೆ ಇದೆ**

ನಮ್ಮ ಸೊಸೈಟಿಯ ಕಚೇರಿಯು ದಾವಣಗೆರೆ ಪಿ.ಹಾಲೇಶಪ್ಪ ರಸ್ತೆ (ವಸಂತ ರಸ್ತೆ) ಯಲ್ಲಿರುವ ಸ್ವಂತ ಕಟ್ಟಡಕ್ಕೆ ಶೀಘ್ರದಲ್ಲೇ ಸ್ಥಳಾಂತರಗೊಳ್ಳಲಿದೆ ಎಂದು ತಿಳಿಸಲು ಹರ್ಷಿಸುತ್ತೇವೆ.

ಈ ಹಿನ್ನೆಲೆಯಲ್ಲಿ ಈಗಿರುವ ವಿಜಯಲಕ್ಷ್ಮಿ ರಸ್ತೆಯಲ್ಲಿರುವ ಕಚೇರಿಯು 16x120 ಅಡಿ ಅಳತೆಯಲ್ಲಿದ್ದು, ಸೊಸೈಟಿ ಅಥವಾ ಬ್ಯಾಂಕ್ ನಡೆಸಲು ಯೋಗ್ಯವಾಗಿರುತ್ತದೆ. ಪೀಠೋಪಕರಣ, 10x15 ಅಳತೆಯ ಸ್ಟ್ರಾಂಗ್ ರೂಂ, ಇತರೆ ಸಾಮಗ್ರಿಗಳನ್ನು ಹೇಗಿದೆಯೋ ಹಾಗೆಯೇ ಮಾರಾಟ ಮಾಡಿ, ಕಛೇರಿಯನ್ನು ಬಾಡಿಗೆಗೆ ನೀಡಲಾಗುವುದು.

ವಿವರಕ್ಕೆ ಸಂಪರ್ಕಿಸಿ :
ಮ್ಯಾನೇಜರ್ / ಕಾರ್ಯದರ್ಶಿ
ದೂರವಾಣಿ : 08192 233754, ಮೊಬೈಲ್ : 9141740750

# ಡಿಸಿಆರ್‌ಬಿ ತಂಡಕ್ಕೆ ಲಕ್ಷ ರೂ. ನಗದು ಬಹುಮಾನ



ದಾವಣಗೆರೆ, ನ.12- ರೈತರು ಮತ್ತು ವರ್ತಕರಿಂದ ಮೆಕ್ಕೆಜೋಳ ಖರೀದಿಸಿ ವಂಚಿಸಲಾಗಿದ್ದ 2 ಕೋಟಿ 68 ಲಕ್ಷದ 91 ಸಾವಿರದ 470 ರೂ. ಗಳು ಹಾಗೂ ಅದರಲ್ಲೂ ವಿಶೇಷವಾಗಿ ರೈತರ ಶೇ. 100 ರಷ್ಟು ಹಣ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದ ದಾವಣಗೆರೆ ಜಿಲ್ಲಾ ಪೊಲೀಸ್ ಕಚೇರಿಯ ಡಿಸಿಆರ್ ಬಿ ಘಟಕದ ಡಿವೈಎಸ್ಪಿ ಬಿ.ಎಸ್. ಬಸವರಾಜ್ ನೇತೃತ್ವದ ತಂಡಕ್ಕೆ ಜಿಲ್ಲಾ ಪೊಲೀಸ್ ಇಲಾಖೆ 1 ಲಕ್ಷ ನಗದು ಬಹುಮಾನ ನೀಡಿ ಕಾರ್ಯಾಚರಣೆಗೆ ಪ್ರಶಂಸೆ ವ್ಯಕ್ತಪಡಿಸಿದೆ.

ಜಿಲ್ಲಾ ಪೊಲೀಸ್ ಕವಾಯತ್ತು ಮೈದಾನದಲ್ಲಿ ಪೂರ್ವ ವಲಯ ಐಜಿಪಿ ಎಸ್. ರವಿ ಅವರು, ಹಣವನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದ ಪೊಲೀಸ್ ತಂಡಕ್ಕೆ ಕರ್ನಾಟಕ ಸರ್ಕಾರದಿಂದ ನೀಡಲಾದ 1 ಲಕ್ಷ ರೂ. ಬಹುಮಾನ ಹಾಗೂ ಪ್ರಶಂಸನಾ ಪತ್ರವನ್ನು ನೀಡಿ ಅಭಿನಂದಿಸಿದರು.


ಡಿವೈಎಸ್ಪಿ ಬಿ.ಎಸ್. ಬಸವರಾಜ್, ಎಎಸ್ಐ ಅಂಜನಪ್ಪ , ಸಿಬ್ಬಂದಿಗಳಾದ ಕೆ.ಸಿ. ಮಜೀದ್, ಕೆ.ಟಿ. ಆಂಜನೇಯ, ಡಿ. ರಾಘವೇಂದ್ರ, ಯು. ಮಾರುತಿ, ಪಿ. ಸುರೇಶ್, ನಟರಾಜ್, ಇ.ಬಿ. ಅಶೋಕ್, ಆರ್. ರಮೇಶ್‌ನಾಯ್ಕ, ಸಿ.ಎಸ್. ಬಾಲರಾಜ್ , ಸಿ. ಮಲ್ಲಿಕಾರ್ಜುನ, ಜಿ.ಎಸ್. ಬಸವರಾಜ್ ಒಳಗೊಂಡ ತಂಡ ಈ ಬಹುಮಾನಕ್ಕೆ ಭಾಜನವಾಗಿದೆ.

ಈ ಸಂದರ್ಭದಲ್ಲಿ ಪೊಲೀಸ್ ಅಧೀಕ್ಷಕ ಸಿ.ಬಿ. ರಿಷ್ಯಂತ್, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಂ. ರಾಜೀವ್ ಹಾಗೂ ಜಿಲ್ಲೆಯ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಇದ್ದರು.




ಬಂಗಾಳ ಕೊಲ್ಲಿ ವಾಯುಭಾರ ಕುಸಿತದ ಪರಿಣಾಮ ದಾವಣಗೆರೆಯಲ್ಲಿ ಕಳೆದ ಎರಡು ದಿನಗಳಿಂದ ಮೋಡ ಕವಿದ ವಾತಾವರಣವಿದೆ. ತಾಪಮಾನ ಕನಿಷ್ಠ 21 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಶುಕ್ರವಾರ ಮುಂಜಾನೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಇಬ್ಬನಿಯನ್ನು ಸೀಳಿಕೊಂಡು ಹೋಗುತ್ತಿರುವ ವಾಹನಗಳು.

# ಚಿಲ್ಲರೆ ನೇರ ಹೂಡಿಕೆ ಯೋಜನೆಗೆ ಚಾಲನೆ : ಪ್ರಧಾನಿ ಮೋದಿ



ನವದೆಹಲಿ, ನ. 12 – ಸರ್ಕಾರದ ಸೆಕ್ಯುರಿಟಿಗಳಲ್ಲಿ ಜನ ಸಾಮಾನ್ಯರು ಹೂಡಿಕೆ ಮಾಡಲು ನೆರವಾಗುವ ಯೋಜನೆಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಚಾಲನೆ ನೀಡಿದ್ದಾರೆ.

ರಿಸರ್ವ್ ಬ್ಯಾಂಕ್‌ನ ಚಿಲ್ಲರೆ ನೇರ ಹೂಡಿಕೆ ಯೋಜನೆ ಹಾಗೂ ಸಮಗ್ರ ಓಂಬುಡ್ಸ್‌ಮನ್ ಯೋಜನೆಗಳಿಗೆ ಪ್ರಧಾನಿ ಚಾಲನೆ ನೀಡಿದ್ದಾರೆ. ಇದು ದೇಶದಲ್ಲಿ ಹೂಡಿಕೆ ವಿಸ್ತರಿಸಲು ನೆರವಾಗಲಿದೆ.ಇದರಿಂದಾಗಿ ಬಂಡವಾಳ ಮಾರುಕಟ್ಟೆಯಲ್ಲಿ ಹೂಡಿಕೆ ಸರಳವಾಗಲಿದೆ ಎಂದು ಅಂದಾಜಿಸಲಾಗಿದೆ.

ಚಿಲ್ಲರೆ ನೇರ ಹೂಡಿಕೆಯಿಂದ ಜನರ ಹೂಡಿಕೆಗೆ ನೆರವಾಗುವ ಜೊತೆಗೆ, ಅಭಿವೃದ್ಧಿ ಕಾರ್ಯಗಳಿಗೆ ಹೂಡಿಕೆಯೂ ಸಿಗಲಿದೆ ಎಂದು ಪ್ರಧಾನಿ ಹೇಳಿದ್ದಾರೆ.

ಬ್ಯಾಂಕಿಂಗ್ ವಲಯದ ಓಂಬುಡ್ಸ್‌ಮನ್‌ಗಳನ್ನು ಏಕೀಕೃತಗೊಳಿಸುವ ಮೂಲಕ, ಒಂದು ದೇಶ ಒಂದು ಓಂಬುಡ್ಸ್‌ಮನ್ ಜಾರಿಗೆ ತರಲಾಗಿದೆ ಎಂದೂ ಪ್ರಧಾನಿ ಹೇಳಿದ್ದಾರೆ.

ಮಧ್ಯಮ ವರ್ಗದವರು, ಉದ್ಯೋಗಿಗಳು, ಸಣ್ಣ ಉದ್ಯಮಿಗಳು ಹಾಗೂ ಹಿರಿಯ ನಾಗರಿಕರು ತಮ್ಮ ಸಣ್ಣ ಉಳಿತಾಯವನ್ನು ನೇರವಾಗಿ ಹಾಗೂ ಸುರಕ್ಷಿತವಾಗಿ ಸರ್ಕಾರದ ಸೆಕ್ಯುರಿಟಿಗಳಲ್ಲಿ ತೊಡಗಿಸಬಹುದು. ಸರ್ಕಾರದ ಸೆಕ್ಯುರಿಟಿಗಳು ಗ್ಯಾರಂಟಿ ಯೋಜನೆಗಳಾಗಿವೆ, ಇದು ಸಣ್ಣ ಹೂಡಿಕೆದಾರರಿಗೆ ಸುರಕ್ಷತೆ ಕೊಡುತ್ತವೆ ಎಂದು ಮೋದಿ ಹೇಳಿದ್ದಾರೆ.

ಕಳೆದ ಏಳು ವರ್ಷಗಳಲ್ಲಿ ಭಾರತದಲ್ಲಿ ಡಿಜಿಟಲ್ ವಹಿವಾಟು 19 ಪಟ್ಟು ಹೆಚ್ಚಾಗಿದೆ. ಇಂದು ನಮ್ಮ ಬ್ಯಾಂಕಿಂಗ್ ವ್ಯವಸ್ಥೆ ದಿನದ 24 ಗಂಟೆಯೂ ಕಾರ್ಯ ನಿರ್ವಹಿಸುತ್ತಿದೆ ಹಾಗೂ ದೇಶದೆಲ್ಲೆಡೆ ಕಾರ್ಯ ನಿರ್ವಹಿಸುತ್ತಿದೆ ಎಂದು ಪ್ರಧಾನಿ ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

# ಜಿ.ಎಂ. ಶುಗರ್ ಅಂಡ್ ಎನರ್ಜಿ ಕಂಪನಿಯಿಂದ ಅಕ್ರಮ ಗಣಿಗಾರಿಕೆ

ದಾವಣಗೆರೆ, ನ.12- ಹಾವೇರಿ ಜಿಲ್ಲೆ ರಟ್ಟಿಹಳ್ಳಿ ತಾಲ್ಲೂಕು ಚಟ್ನಿಹಳ್ಳಿ ಹಾಗೂ ಇತರೆ ಗ್ರಾಮಗಳಲ್ಲಿ ಕೆಐಎಡಿಬಿ ಯಿಂದ ಲೀಜ್‌ಗೆ ಪಡೆದ ಭೂಮಿಯಲ್ಲಿ ಮೆ.ಜಿ.ಎಂ. ಶುಗರ್ಸ್ ಹಾಗೂ ಎನರ್ಜಿ ಲಿಮಿಟೆಡ್ ಕಂಪನಿಯಿಂದ ಅಕ್ರಮ ಗಣಿಕೆ ನಡೆಸಲಾಗುತ್ತಿದೆ ಎಂದು ಸಾಮಾಜಿಕ ಹೋರಾಟಗಾರರೂ, ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಅಧ್ಯಕ್ಷರೂ ಆದ ಎಸ್.ಆರ್. ಹಿರೇಮಠ ಆರೋಪಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ದಾಖಲೆಗಳ ಸಹಿತ ಮಾತನಾಡಿದ ಅವರು, ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯ ಕಾರ್ಯ ದರ್ಶಿಗಳ ಆದೇಶದಂತೆ ಹಾವೇರಿ ಹಾಗೂ ಧಾರವಾಡ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ವರದಿ ಸಲ್ಲಿಸಿರುವುದಲ್ಲದೆ, ಗಂಭೀರವಾಗಿ ನಡೆದಿರುವ ಅಕ್ರಮ ಗಳು, ಅವ್ಯವಹಾರಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ನೋಟೀಸ್ ನೀಡಿದ್ದಾರೆ ಎಂದರು.

ಪ್ರತಿ ವಾರ ನೂರು ಕೋಟಿ ರೂ.ನಷ್ಟು ಮೌಲ್ಯದ ಗಣಿಗಾರಿಕೆಯು ನಡೆಯುತ್ತಿದೆ. ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಸಾಕಷ್ಟು ನಷ್ಟ ಉಂಟಾಗಿದೆ. ಈಗಾಗಲೇ ಚಟ್ನಿಹಳ್ಳಿ ಹಾಗೂ ಸುತ್ತ ಮುತ್ತ ಲಿನ ಗ್ರಾಮಸ್ಥರು ಅಕ್ರಮ ಗಣಿಗಾರಿಕೆಯ ವಿರುದ್ಧ ಯುದ್ಧ ಸಾರಿದ್ದಾರೆ. ಈ ಹಿಂದೆ ಬಳ್ಳಾರಿಯಲ್ಲಿ ನಡೆದಂತೆ ಇಲ್ಲಿಯೂ ಪ್ರಾಕೃತಿಕ ಸಂಪತ್ತಿನ ಲೂಟಿ ನಡೆಯುತ್ತಿದೆ ಎಂದರು.

ಈ ಕೂಡಲೇ ಅಕ್ರಮ ಗಣಿಗಾರಿಕೆ ಸ್ಥಗಿತಗೊಳಿಸಬೇಕು. ಕ್ರಷರ್ ಕಲ್ಲು ಪುಡಿ ಮಾಡುವ ಮಿಷನ್‌ಗಳ್ನು ಸ್ಥಗಿತಗೊಳಿಸ ಬೇಕು. ಮೆ. ಜಿ. ಎಂ. ಶುಗರ್ಸ್ ಮತ್ತು ಎನರ್ಜಿ ಲಿ.ಕಂಪನಿ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಬೇಕು. ಅಕ್ರಮ ಗಣಿಗಾರಿಕೆಯಿಂದ ತೆಗೆದ ಕಲ್ಲು ಹಾಗೂ ಕ್ರಷರ್‌ಗಳಿಂದ ತೆಗೆದು ಸಂಗ್ರಹಿದ ಜಲ್ಲಿಯನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕು. ಈಗಾಗಲೇ ಮಾರಾಟ ಮಾಡಲಾದ ಮೌಲ್ಯವನ್ನು ದಂಡದೊಂದಿಗೆ ಸರ್ಕಾರಕ್ಕೆ ಜಮಾ ಮಾಡಿಸಿಕೊಳ್ಳಬೇಕು ಎಂದು ಹಿರೇಮಠ ಆಗ್ರಹಿಸಿದರು.

**ಮರಳು ಮಾಫಿಯಾ ಬಗ್ಗೆಯೂ ಕ್ರಮ ಅಗತ್ಯ:** ರಾಜ್ಯ ಸರ್ಕಾರದ ನೂತನ ಮರಳು ನೀತಿಯ ಕೆಲ ಅಂಶಗಳಾದ ಗ್ರಾ.ಪಂ.ಗಳೊಂದಿಗೆ ರಾಜಧನ ಶೇ.25ರಷ್ಟು ಹಂಚಿಕೊಳ್ಳುವುದು, ಬಡವರಿಗೆ ರಿಯಾಯಿತಿ ದರದಲ್ಲಿ ಮರಳು ನೀಡುವುದು ಸ್ವಾಗತಾರ್ಹ. ಆದರೆ ಕಬ್ಬಿಣದ ಅದಿರು ಮಾಫಿಯಾದಂತೆ ಮರಳು ಮಾಫಿಯಾ ಸಹ ವ್ಯವಸ್ಥಿತವಾಗಿ ನಡೆದಿಕೊಂಡು ಬರುತ್ತಿದ್ದು ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಿ ಮರಳು ಮಾಫಿಯಾ ವನ್ನು ಸದೆಬಡಿಯಬೇಕಿದೆಯಲ್ಲದೆ, ಪರಿಸರ ಕೇಂದ್ರಿತವಾಗಿ ಸಮಗ್ರ ನೀತಿಯ ಅವಶ್ಯವಿದೆ ಎಂದು ಹಿರೇಮಠ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಮುಖಂಡ ಬಲ್ಲೂರು ರವಿಕುಮಾರ್, ವಕೀಲ ಅನಿಸ್ ಪಾಷ, ಎಂ.ಸಿ. ಹಾವೇರಿ, ಆರ್.ಬಿ. ಪಟೇಲ್, ನಾಗಪ್ಪ ದೊಡ್ಡಮನಿ ಉಪಸ್ಥಿತರಿದ್ದರು.


ವಾಣಿಜ್ಯೋದ್ದೇಶಕ್ಕಾಗಿ ಬಾಡಿಗೆಗೆ ಜಾಗ ಬೇಕಾಗಿದೆ

ಪ್ರತಿ ಕಾಲಂನ ಕನಿಷ್ಠ ಅಂತರ 16 ಅಡಿ ಅಗಲ ಇರುವ ನೆಲ ಅಂತಸ್ತು 4000 - 5000 ಅಡಿ ನೆಲ ಮತ್ತು 1ನೇ ಮಹಡಿ, ಲಿಫ್ಟ್ ವ್ಯವಸ್ಥೆ, 150 KV ಟ್ರಾನ್ಸ್‌ಫಾರ್ಮರ್ ಹಾಗೂ ಕನಿಷ್ಠ 40 ಅಡಿ ಮುಂಭಾಗ ಆವರಣವಿರುವ ಜಾಗವು ಬೇಕಾಗಿದೆ.

ಸ್ಥಳ: ಎಂಸಿಸಿ 'ಎ' ಬ್ಲಾಕ್/ಎಂಸಿಸಿ 'ಬಿ' ಬ್ಲಾಕ್/ಪಿ.ಜೆ. ಬಡಾವಣೆ

ಆಸ್ತಿ ಮಾಲೀಕರು ನೇರವಾಗಿ ಸಂಪರ್ಕಿಸಿ :

ಮೊ : 78990 55440

WANTED

Senior Accountant

Qualification : B.Com., / M.Com.,

Experience : 3-4 Years

Knowledge of GST and TDS filing is essential

Step in for interview on 13th November 2021 at 10 A.M.

SIR M V P U COLLEGE

Near Govt. ITI College, Hadadi Road, DAVANGERE-577 005.

Ph: 08192-261200

ವೈಕುಂಠ ಸಮಾರಾಧನೆ ಆಹ್ವಾನ



ನನ್ನ ಪೂಜ್ಯ ತಂದೆಯವರಾದ

ಶ್ರೀ ಮಂಜುನಾಥ್ ಕೃಷ್ಣ ಕುರ್ಡೇಕರ್

ಇವರು 31.10.2021 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ದಿನಾಂಕ : 13.11.2021ನೇ ಶನಿವಾರ ಮಧ್ಯಾಹ್ನ 12.00 ಗಂಟೆಗೆ "ವೈಕುಂಠ ಸಮಾರಾಧನೆ"ಯನ್ನು ದೈವಜ್ಞ ಕಲ್ಯಾಣ ಮಂಟಪ, ಪಿ.ಬಿ. ರಸ್ತೆ, ದಾವಣಗೆರೆ ಇಲ್ಲಿ ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಧರ್ಮಪತ್ನಿ - ಶ್ರೀಮತಿ ಮಮತಾ ಮಂಜುನಾಥ್,

ಮಗ: ಮೋಹಿತ್ ಎಂ. ಕುರ್ಡೇಕರ್, ಹೆಣ್ಣು ಮಕ್ಕಳು, ಅಳಿಯ ಹಾಗೂ ಮೊಮ್ಮಕ್ಕಳು

ವಿ.ಸೂ. : ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

Buy 3 Get 1 FREE!*




* Conditions apply

Authorised Dealer:

HOME STYLE

Jarekatte Plaza, Beside Savita Hotel, Shamanur Road, Near SS Mall, Davangere - 577004. Ph: 08192-230483

Cell: 98864 94432, 99456 89996

ಗ್ರಾಹಕರ ಒತ್ತಾಯದ ಮೇರೆಗೆ ಸೇಲ್‌ನ್ನು 4 ದಿನಗಳು ವಿಸ್ತರಿಸಲಾಗಿದೆ ಹೊಸ ಸ್ಟಾಕ್ ಲಭ್ಯ

ಜಿಲ್ಲಾ ಗುರುಭವನ ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆಯಲ್ಲಿ

NATIONAL & INTERNATIONAL BRANDED READYMADE GARMENTS

ಭಾರಿ ರಿಯಾಯಿತಿ ಮಾರಾಟ

ಮಹಿಳೆಯರ, ಪುರುಷರ, ಮಕ್ಕಳ ರೆಡಿಮೇಡ್ ಗಾರ್ಮೆಂಟ್ಸ್ ಹಾಗೂ ಬೆಡ್‌ಶೀಟ್‌ಗಳ ಮೇಲೆ ಭಾರಿ ರಿಯಾಯಿತಿ.

Raymond, ARROW USA·1851, IZOD, Pepe Jeans LONDON, Crocodile, PARK AVENUE, Lee, parx, NETPLAY, ColorPlus

ರಾಜಸ್ತಾನ ರಾಯಲ್ ಪ್ರಿಂಟ್ ಬೆಡ್‌ಶೀಟ್ ಮೇಳ

SYMBOL OF QUALITY

ಬೆಡ್ ಶೀಟ್ : ಕತಾ ವರ್ಕ್ಸ್, ವರ್ಲಿ ಪ್ರಿಂಟ್, ಮಿಕ್ಕಿ ಮೌಸ್ ಪ್ರಿಂಟ್, ಕಾಟನ್ ಸಟಿನ್ ಬೆಡ್‌ಶೀಟ್, ಕಲಂಕಾರಿ ಪ್ರಿಂಟ್,

ಎಂಬ್ರಾಯಿಡ್ ವರ್ಕ್ಸ್, ಕಲಂಕಾರಿ ಗೋಲ್ಡ್ ಪ್ರಿಂಟ್

AC ಬ್ಲಾಂಕೆಟ್, ಪ್ಯಾಚ್ ವರ್ಕ್ಸ್ ಇತ್ಯಾದಿ

ಕುಶನ್ ಕವರ್ :

ಸೋಫಾ ಶೀಟ್, ದಿವಾನ್ ಕಾಟ್ ಶೀಟ್

ಪಿಲ್ಲೋ ಕವರ್, ಮ್ಯಾಟ್, ಟೇಬಲ್ ಕ್ಲಾತ್,

ವೆಜಿಟೇಬಲ್ ಪ್ರಿಂಟ್, ಸೈಜ್ ಬೆಡ್ ಶೀಟ್ ಇತ್ಯಾದಿ

50,000 ವಿವಿಧ ಪ್ರಕಾರದ ಜಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್, ಟೀ–ಶರ್ಟ್, ಲೋವರ್, ಟಾಪ್, ಬರ್ಮುಡಾ, ಕೇಪ್ರಿ, ಪ್ಲಾಜೊ, ಲೇಡಿಸ್ ಪೈಜಾಮ, ಕಿಡ್ಸ್ ಡ್ರೇಸ್, ಶರ್ಟ್, ಫ್ಯಾನ್ಸಿ, ಕುರ್ತೀಸ್, ನೈಟಿ ಎಕ್ಸ್‌ಪೋರ್ಟ್ ಸರ್ಪಸ್ ಐಟಂ ಹಾಗೂ ಇತರೆ

ಕೇವಲ ರೂ. 150/- ರಿಂದ 350/- ರವರೆಗೆ

ಬ್ರಾಂಡೆಡ್ ಲೇಡಿಸ್ ಕುರ್ತೀಸ್ ಮೇಳಾ : MRP. Upto ರೂ.3000/-

ಲೇಡಿಸ್ ಕುರ್ತೀಸ್ : ಮಲ್ಟಿಗ್ರೀನ್ ಕಾಟನ್ ಕುರ್ತೀಸ್, ವಿವಿಧ ಬಣ್ಣಗಳ ಕುರ್ತೀಸ್, ಎಕ್ಸ್‌ಲೆಂಟ್ ಪಾರ್ಟಿವೇರ್, ಕುರ್ತೀಸ್, ಎಂಬ್ರಾಯಡೆಡ್ ರಯಾನ ಕುರ್ತೀಸ್, ಪ್ರಿಂಟೆಡ್ ಕಾಟನ್ ಲಾಂಗ್–ಶಾರ್ಟ್ ಕುರ್ತೀಸ್ ಇತ್ಯಾದಿ.

ಕೇವಲ ರೂ. 350/- ಮತ್ತು 500/- ಮಾತ್ರ

ಬಿಗ್ ಬ್ರಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್

MRP. ರೂ.1499/- ರಿಂದ 4999/-

ಪ್ಯಾಂಟ್, ಶರ್ಟ್, ಟಿ–ಶರ್ಟ್ ಮತ್ತು ಪುಲ್‌ಓವರ್

ಶರ್ಟ್, ಟಿ–ಶರ್ಟ್ : ಪಾರ್ಟಿವೇರ್, ಬೆಸ್‌ನೆಸ್‌ಕ್ಲಾಸ್, ಆಫೀಸ್‌ವೇರ್, ಫಾರ್ಮಲ್, ಕ್ಯಾಷ್ಯುಯಲ್ ಇತ್ಯಾದಿ.

ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್ : ಸಿಲ್ಕ್‌ಸ್ಟ್ರೀಚ್, ಮಸ್‌ರೈಸ್ ಸ್ಟ್ರೆಚ್, ಸ್ಟ್ರೆಚ್ ಚಿನ್ನೂಸ್ ಕಾಟನ್, ಸಾರ್ಟಿನ್ ಸ್ಟ್ರೆಚ್ ಇತ್ಯಾದಿ.

ಕೇವಲ ರೂ. 499/- ರಿಂದ 999/- ಮಾತ್ರ

BIG OFFER 4 Shirts Just Rs. 999/-

MRP Upto Rs. 7999/- Big Brand BLAZER Plan, Checks, Fancy, Etc Just Rs. 999/- Onwards

ಬಿಗ್ ಬ್ರಾಂಡ್ ಕಿಡ್ಸ್ ಮೇಳ



MRP upto Rs.1999/-

ಹುಡಗಿಯರ : ಟಾಪ್, ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಫ್ಯಾನ್ಸಿ ಫ್ರಾಕ್, ಫ್ಯಾನ್ಸಿ ಡ್ರೆಸ್, ಪುಲೋವರ್, ಜಾಕೆಟ್ ಇತ್ಯಾದಿ

ಹುಡುಗರ : ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಶರ್ಟ್, ಟೀ–ಶರ್ಟ್, ಪುಲೋವರ್, ಫ್ಯಾನ್ಸಿ ಡ್ರೇಸ್, ಜಾಕೆಟ್ ಇತ್ಯಾದಿ

ಕೇವಲ ರೂ: 150/- ರಿಂದ 599/- ಮಾತ್ರ

Size 1 Month to 12 Years



ಆಫರ್ 4 ದಿನಗಳ ಮಾತ್ರ, 13, 14, 15 ಮತ್ತು 16 ನವೆಂಬರ್ 2021

ಸಮಯ:10 am to 9 pm NO LUNCH BREAK

ಜಿಲ್ಲಾ ಗುರುಭವನ ಎ.ವಿ.ಕೆ. ಕಾಲೇಜು ರಸ್ತೆ, ದಾವಣಗೆರೆ

ZILLA GURUBHAWAN A V K College Road DAVANGERE

FREE ENTRANCE PARKING

All Major Debit / Credit Cards. Google Pay, PhonePa Accepted

As per Govt. Rules Please

Wear Mask & Maintain Scoial Distance


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte